# ಎಲ್ಲರು ಉತ್ತರಿಸಲೇಬೇಕಾದ ಒಂದು ಪ್ರಶ್ನೆ

### ಓದುವ ಮನೆಪಾಠ #38

VII. ಯೇಸುವಿನ ಸೇವೆಯ ಅಂತಿಮ ವಾರ (ಮುಂದುವರೆಯುವದು).
  H. ಶುಕ್ರವಾರ: ಯೇಸುವಿನ ಮರಣದ ದಿನ (ಮುಂದುವರೆಯುವದು).
    7. ರೋಮಾಯರ ವಿಚಾರಣೆ (ಮುಂದುವರೆಯುವದು):
      b. ಎರಡನೇ ಸಂದರ್ಭ: ಹೆರೋದ ಅಂತಿಪನ ಮುಂದೆ ವಿಚಾರಣೆ (ನಿರಪರಾಧಿ ಎಂಬ ನಿರ್ಣಯ) (ಲೂಕ 23:8-12).
      c. ಮೂರನೇ ಸಂದರ್ಭ: ಪಿಲಾತನ ಮುಂದೆ (ಮರಣದ ನಿರ್ಣಯ) (ಮತ್ತಾಯ 27:15-31ಎ; ಮಾರ್ಕ 15:6-20ಎ; ಲೂಕ 23:13-25; ಯೋಹಾನ 18:39-19:16).

### ಪೀಠಿಕೆ

ನಮ್ಮ ಹಿಂದಿನ ಪಾಠವು ಯೇಸುವಿನ ವಿಚಾರಣೆಯ ಮೇಲಿನ ಅಂತಿನ ಪಾಠವಾಗಿತ್ತು. "ಯೇಸುವನ್ನು ನಾನೇನು ಮಾಡಬೇಕು?" ಎಂಬ ಪ್ರಶ್ನೆಯ ಮೇಲೆ ಒತ್ತು ಕೊಡಲಾಗಿತ್ತು (ನೋಡಿರಿ ಮತ್ತಾಯ 27:22). ಯಾರು ತಮ್ಮ ಪ್ರತಿಕ್ರಿಯೆಯಲ್ಲಿ ಖಡಾಖಂಡಿತವಾಗಿದ್ದರು ಎಂಬುದನ್ನು ನಾವು ನೋಡಿದ್ದೇವೆ: ಇದಕ್ಕೆ ಪ್ರತಿಯಾಗಿ ಪೇತ್ರನು "ನಾನು ಆತನನ್ನು ನಿರಾಕರಿಸಿದೆನು!" ಎಂದು ಹೇಳಿದಾಗ ಮಹಾ ಸಭೆಯು "ನಾವು ಆತನನ್ನು ಶಪಿಸಿದೆವು!" ಎಂದಿತು. ಇನ್ನೊಂದು ಹೇಗೂ, ಪ್ರಶ್ನೆಯೊಡನೆ ಹೋರಾಡುತ್ತಾ ಪಿಲಾತನು "ನಾನು ಆತನನ್ನು ಬಿಡುಗಡೆ ಮಾಡುತ್ತೇನೆ" ಎಂದು ಹೇಳಬೇಕೆಂದು ತಿಳಿದಿದ್ದರೂ ಕೂಡಾ ಆತನು ಹಾಗೆ ಮಾಡಿದ್ದಾದರೆ ರಾಜಕೀಯ ತೊಡರುಗಳಿಗಾಗಿ ಆತನು ಹೆದರಿದನು. ಪಾಠದ ಎರಡನೆಯ ಭಾಗವನ್ನು ನಾವು ಅಧ್ಯಯನ ಮಾಡುತ್ತಿರುವಂತೆಯೇ ಇತರರು. "ಯೇಸುವನ್ನು ನಾನೇನು ಮಾಡಬೇಕು?" ಈ ಪ್ರಶ್ನೆಗೆ ಹೇಗೆ ಉತ್ತರಿಸಿದರು ಎಂಬುದನ್ನು ನಾವು ಗಮನಿಸುವಾ. ನಾವು ಪಿಲಾತನ ಅಂತಿಮ ಉತ್ತರವನ್ನು ಸಹ ನೋಡುವಾ.

### ಹೆರೋದ: "ನಾನು ಕೇವಲ ಕುತೂಹಲವುಳ್ಳವನಾಗಿದ್ದೇನೆ" (ಲೂಕ 23:5-11)

ನಮ್ಮ ಹಿಂದಿನ ಪಾಠವನ್ನು ಮುಗಿಸುವಲ್ಲಿ, ಪಿಲಾತನು ತನ್ನ ಸಂಧಿಗ್ಧತೆಯ ಪರಿಹಾರವನ್ನು ಕಂಡುಕೊಂಡನು. ಯೇಸು ಗಲಿಲಾಯದವನೆಂದು ಆತನು ತಿಳಿದಿದ್ದನು (ವಚನಗಳು 5, 6), ಅದು ಹೆರೋದನ ಪ್ರಾಂತ್ಯವಾಗಿತ್ತು "ಆತನನ್ನು ಹೆರೋದನ ಬಳಿಗೆ ಕಳುಹಿಸಿದನು"[1] (ವಚನ 7). ಯೇಸುವನ್ನು ಹೆರೋದನೆಡೆಗೆ ದೂಡುವುದರ ಮೂಲಕ ದೇಶಾಧಿಪತಿಯು ಇಬ್ಬಗೆಯ ಉದ್ದೇಶಗಳನ್ನು ಸಂಪೂರ್ಣಗೊಳಿಸುವ ಉದ್ದೇಶದ ನಿರೀಕ್ಷೆಯನ್ನು ಹೊಂದಿರಬಹುದು: ತೊಂದರೆದಾಯಕವಾದ ಸಮಸ್ಯೆಯಿಂದ ತನ್ನನ್ನು ತಾನು ಹೊರಕ್ಕೆ ಎಳೆದುಕೊಂಡಿರಬಹುದು, ಮತ್ತು ತನ್ನ ಮತ್ತು ಪ್ರಭಾವಶಾಲಿಯಾದ ಅಧಿಕಾರಿಯ ಮಧ್ಯದ ಸಂಬಂಧವನ್ನು ಸಹ ಸುಧಾರಿಸಿಕೊಂಡಿರಬಹುದು (ನೋಡಿರಿ 23:12).[2]

ರೋಮನ್ ಸೈನಿಕರು ಹೆರೋದನೆಡೆಗೆ ನಡೆಸಿದರು.[3] "ಹಿರಿಯ ಯಾಜಕರು ಮತ್ತು ಶಾಸ್ತ್ರಿಗಳ" ಹಿಂದೆ ಹತ್ತಿರವಾಗಿ ನಾಗಾಲೋಟಗೈದರು (ವಚನ 10). ಮೆರವಣಿಗೆಯು

ಮನೆ ಇರುವ ಸ್ಥಳವನ್ನು ತಲುಪಿದಾಗ ಅರಸನು ಬಹಳ ಸಂತೋಷಪಟ್ಟನು. "... ಆತನ ವಿಷಯದಲ್ಲಿ ಅನೇಕ ಸಂಗತಿಗಳನ್ನು ಕೇಳಿದ್ದರಿಂದ ಆತನನ್ನು ಕಾಣಬೇಕೆಂದು ಬಹು ಕಾಲದಿಂದಲೂ ನಿರೀಕ್ಷಿಸಿದ್ದನು" (ವಚನ 8; ನೋಡಿರಿ ಮತ್ತಾಯ 14:1; ಲೂಕ 9:7-9). ಹೆರೋದನಿಗೆ ಯೇಸುವನ್ನು ನೋಡುವ ಅಥವಾ ಆತನ ಬೋಧನೆಯನ್ನು ಕೇಳುವ ಇಚ್ಛೆಯಿರಲಿಲ್ಲ, ಆತನು ಕೇವಲ ಕುತೂಹಲವುಳ್ಳವನಾಗಿದ್ದನು. ಆತನ ಕುತೂಹಲವನ್ನು ತಣಿಸುವ ಇಚ್ಛೆಯು ಕ್ರಿಸ್ತನಿಗೆ ಇರಲಿಲ್ಲ (ನೋಡಿರಿ ಮತ್ತಾಯ 7:6). ಹೆರೋದನು ಆತನನ್ನು ಪ್ರಶ್ನಿಸಿದಾಗ "ಆತನು ಅವನಿಗೆ ಯಾವ ಉತ್ತರವನ್ನು ಕೊಡಲಿಲ್ಲ" (ಲೂಕ 23:9; ನೋಡಿರಿ ಯೆಶಾಯ 53:7). ಅರಸನೂ ಸಹ ಮಾಯಾಜಾಲದ ಮನರಂಜನೆಯಾಗುವದು ಎಂಬ ನಿರೀಕ್ಷೆಯನ್ನು ಹೊಂದಿದ್ದನು (ಲೂಕ 23:8) - ಆದರೆ ಕ್ರಿಸ್ತನು ಬೇಡಿಕೆಯ ಮೇರೆಗೆ ಅದ್ಭುತ ಕಾರ್ಯಗಳನ್ನೂ ಎಂದಿಗೂ ಮಾಡುತ್ತಿರಲಿಲ್ಲ (ನೋಡಿರಿ ಮತ್ತಾಯ 12:38, 39; 16:1, 4). ಆತನ "ಸೂಚನ ಕಾರ್ಯಗಳು" ಗಂಭೀರವಾದ ಉದ್ದೇಶಗಳನ್ನು ಹೊಂದಿದ್ದವು.

ಯೇಸು ಮೂರ್ಖರೊಡನೆ ಮಾತನಾಡಲು ನಿರಾಕರಿಸಿದಾಗ,[4] ಹೆರೋದನು ತನ್ನದೇ ಆದ ಮನರಂಜನೆಯನ್ನು ಗೊತ್ತುಪಡಿಸಿದನು. ಆ ಕ್ಷಣವೇ ವೃತ್ತಾಕಾರದಂತೆ ವಾತಾವರಣದ ಮೂಲಕ ಸಾಗಿದನು. ಮಹಾಯಾಜಕರು ಶಾಸ್ತ್ರಿಗಳು ಒಂದೆಡೆಯಿದ್ದು ಜೋರಾಗಿ ಅಪಾದನೆಯನ್ನು ಕೂಗತೊಡಗಿದರು (ಲೂಕ 23:10). ಕೋಣೆಯ ಮಧ್ಯದಲ್ಲಿ ಹಾಸ್ಯಗಾರನಂತ[5] ವೇಶ ಹಾಕಿದ ಯೇಸು ಇದ್ದನು ಅರಸನು ಮತ್ತವನ ಸೈನಿಕರು ಆತನ ಸುತ್ತಲೂ ನೃತ್ಯ ಮಾಡುತ್ತಿದ್ದರು, ಮತ್ತು ತಮಾಷೆ ಮಾಡುತ್ತಿದ್ದರು (ಲೂಕ 23:11).[6] ಕ್ರಮೇಣ, ಆ ಮಕ್ಕಳಾಟದಿಂದ ಸುಸ್ತಾದರು ಮತ್ತು ಹೆರೋದನು "ಅವನನ್ನು ಪಿಲಾತ ಬಳಿಗೆ ಕಳುಹಿಸಿಕೊಟ್ಟನು" (ಲೂಕ 23:11).

ದುರಾದೃಷ್ಟವಶಾತ್, ಇಂದು ಯೇಸುವಿನ ಬಗೆಗೆ ಹೆರೋದಗಿಂತಲೂ ಬಲು ಆಳವಾದ ಆಸಕ್ತಿ ಇಲ್ಲದ ಜನರಿದ್ದಾರೆ. ಅವರು ಆತನ ಬಗೆಗೆ ಕೇವಲ ಕೂತುಹಲವುಳ್ಳವರಾಗಿದ್ದಾರೆ. ಚರ್ಚೆಯು ತೋರಿಕೆಯ ಮಟ್ಟದ್ದಾಗಿರುವಷ್ಟು ಹೊತ್ತು ಆತನ ಬಗೆಗೆ ಹೆಚ್ಚಾಗಿ ತಿಳಿದುಕೊಳ್ಳುವ ಇಚ್ಛೆಯುಳ್ಳವರಾಗಿರುತ್ತಾರೆ, ಆದರೆ ಆತನು ನಿಜವಾಗಿಯೂ ಯಾರಾಗಿದ್ದಾನೆ ಎಂಬುದರ ಬಗ್ಗೆ ಅವರೆಂದಿಗೂ ಗಂಭೀರವಾಗಿ ಸುವಾರ್ತೆಯ ವಿವರಣೆಯನ್ನು ಓದಲಾರರು ಮತ್ತು ಅಧ್ಯಯನ ಮಾಡಲಾರರು. ಆ ಕಾರಣಕ್ಕಾಗಿ, ಅವರೆಂದಿಗೂ ಆತನನ್ನು ದೇವಕುಮಾರನೆಂದು ಒಪ್ಪಿಕೊಳ್ಳಲಾರರು ಅಥವಾ ತಮ್ಮ ಜೀವಿತವನ್ನು ಆತನಿಗೆ ಒಪ್ಪಿಸಲಾರರು. "ಕುತೂಹಲವು ಬೆಕ್ಕನ್ನು ಕೊಲ್ಲುವುದಾಗಿದೆ" ಎಂದು ಒಂದು ಹಳೆ ಗಾದೆಯು ಹೇಳುತ್ತದೆ; ಯೇಸುವಿನಲ್ಲಿಯ ಒಬ್ಬನ ಆಸಕ್ತಿಯು ಹೆಚ್ಚು ಕೇಂದ್ರಿಕೃತವಾಗದಿದ್ದರೆ ಕುತೂಹಲವು ಆತ್ಮವನ್ನು ಕೊಲ್ಲುವುದಾಗಿದೆ.

## ಜನರ ಗುಂಪು: "ಆತನನ್ನು ಕ್ರೂಜೆಗೆ ಹಾಕಿರಿ!"

## (ಮತ್ತಾಯ 27:15-23; ಮಾರ್ಕ 15:6-14; ಲೂಕ 23:12-23; ಯೋಹಾನ 18:39-19:12)

ಯೇಸುವನ್ನು ಹೆರೋದನೆಡೆಗೆ ಕಳುಹಿಸುವ ಮೂಲಕ ಪಿಲಾತನು ಒಂದು ಉದ್ದೇಶ ವನ್ನು ಸಂಪೂರ್ಣಗೊಳಿಸಿದನು: "ಆತನು ಅರಸನೊಡನೆ ತನ್ನ ಸಂಬಂಧವನ್ನು ಸುಧಾರಿಸಿಕೊಂಡನು" (ಲೂಕ 23:12). ಹೇಗೂ, ಇತರವುಗಳನ್ನು ಆತನು ಸಂಪೂರ್ಣಗೊಳಿಸಲಿಲ್ಲ. ಯೇಸುವಿನೊಡನೆ ವ್ಯವಹರಿಸುವುದಕ್ಕೆ ಆತನು ಇನ್ನೂ ಜವಾಬ್ದಾರ ನಾಗಿದ್ದನು. ದೇಶಾಧಿಪತಿಯು ಆತನನ್ನು ಬಿಡಿಸಲು ತಿರುಗಿ ಯತ್ನಿಸಿದನು.

ತರುವಾಯ ಪಿಲಾತನು ಮಹಾಯಾಜಕರನ್ನೂ ಅಧಿಕಾರಿಗಳನ್ನು ಪ್ರಜೆಗಳನ್ನೂ ಒಟ್ಟಾಗಿ ಕರೆಸಿ ಅವರಿಗೆ "ಮನುಷ್ಯನು ಪ್ರಜೆಗಳನ್ನು ತಿರುಗಿ ಬೀಳುವಂತೆ ಮಾಡುವವನು ಎಂದು ನೀವು ನನ್ನ ಬಳಿಗೆ ತಂದಿರಲ್ಲಾ; ನೀವು ಇವನ ಮೇಲೆ ತಂದ ದೂರುಗಳ ವಿಷಯವಾಗಿ ನಾನು ನಿಮ್ಮ ಮುಂದೆಯೇ ವಿಚಾರಣೆ ಮಾಡಿದಲೂ ಇವನಲ್ಲಿ ಒಂದು ತಪ್ಪಾದರೂ ನನಗೆ ಕಾಣಲಿಲ್ಲ. ಹೆರೋದನಿಗಾದರೂ[7] ಕಾಣಲಿಲ್ಲ; ಅವನು ತಿರುಗಿ ನಮ್ಮ ಬಳಿಗೆ ಕಳುಹಿಸಿದನಲ್ಲಾ. ಇವನು ಮರಣದಂಡನೆಗೆ ಯೋಗ್ಯವಾದದ್ದೇನೂ ಮಾಡಿದವನಲ್ಲವೆಂದಾಯಿತು. ಆದುದರಿಂದ ಇವನನ್ನು ಹೊಡಿಸಿ ಬಿಟ್ಟುಬಿಡುತ್ತೇನೆ" (ಲೂಕ 23:13-16).

ಎರಡನೆ ಸಾರಿ, ಪಿಲಾತನು ಯೇಸು "ತಪ್ಪಿತಸ್ಥನಲ್ಲ" ಎಂದು ಉಚ್ಚರಿಸಿದನು. ಇದು "ಪಿಲಾತನು ಆತನು ತಪ್ಪಿಲ್ಲದವನು ಎಂದು ಕಂಡುಕೊಂಡಿದ್ದಾದರೆ ಆತನು ಶಿಕ್ಷೆಯನ್ನು ಯಾಕೆ ತಿಳಿಸಿದನು" ಎಂಬ ಪ್ರಶ್ನೆಯ್ನು ಎಬ್ಬಿಸುವುದಾಗಿದೆ. ಯೆಹೂದಿಗಳು ಯೇಸುವಿನ ಬಗೆಗೆ ಹೊಂದಿರುವ ವಿಪ್ಲವವನ್ನು ಶಾಂತಗೊಳಿಸುವ ಆಶೆಯನ್ನು ದೇಶಾಪತಿಯು ಹೊಂದಿದ್ದನು, ಆದರ ನಂತರ ಆತನು ಆತನನ್ನು ಬಿಟ್ಟುಬಿಡುವವನಾಗಿದ್ದನು (ಲೂಕ 23:16; ನೋಡಿರಿ 22ನ್ನು ಸಹ). ಲೂಕ 23:16ರಲ್ಲಿ "ಶಿಕ್ಷೆ" ಎಂಬ ಪದದ ಗ್ರೀಕ್ ಭಾಷಾಂತರದ ಮೂಲ ಅರ್ಥವು "ಬೋಧಿಸು ಅಥವಾ ತರಬೇತಿಗೊಳಿಸು" ಎಂದಾಗಿದೆ.[8] ಆದ್ದರಿಂದ ಪಿಲಾತನು "ಈ ಮನುಷ್ಯನಿಗೆ ಪಾಠವನ್ನು ಕಲಿಸುತ್ತೇನೆ!" ಎಂದು ಯೆಹೂದ ನಾಯಕರುಗಳಿಗೆ ಹೇಳಿದನು.

"ಪಾಠವು" ಎಲ್ಲಿ ನಡೆಯುತ್ತದೋ ಅದು ವಿಪ್ಲವದ ಕೋಣೆಯಾಗಿದ್ದು ಶಾಲಾಕೋಣೆ ಯಂತಿರುತ್ತದೆ (ಯೋಹಾನ 19:1; ನೋಡಿರಿ ಮತ್ತಾಯ 27:26; ಮಾರ್ಕ 15:15).[9] J. W. Shepard ರವರು ರೋಮನ್ ದೊಂಬಿಯು ಸಂಭವಿಸುವಂತೆ ಮಾಡುವ ವಿವರಣೆಯನ್ನು ಹೀಗೆ ಕೊಡುತ್ತಾರೆ.

ಆ ಉಪದ್ರವ್ಯದಲ್ಲಿನ ಚಬಕಲಪ ಅನೇಕ ತೊಗಲಿನ ಬಾರುಗಳ ಜೊತೆ ಹೆಣೆದುಕೊಂಡಿತ್ತು ಪ್ರತಿಯೊಂದು ಕಾಳಿನ ರೂಪದ ಸೀಸದ ಗೋಲಿಗಳಿಂದ ಅಥವಾ ಚೂಪಾದ ಎಲಬುಗಳ ತುಡುಗಳಿಂದ ಅಥವಾ ಚೂಪಾದ ಎಲುಬುಗಳ ತುಡುಗಳಿಂದ ಅಥವಾ ಸಲಾಕೆಯಿಂದ ತುಂಬಿಸಲ್ಪಟ್ಟಿತ್ತು. ಆತನ ಬಟ್ಟೆಗಳು, ಹರಿಯಲ್ಪಟ್ಟಿದ್ದವು, ಆತನ ಕೈಗಳು ಸ್ತಂಭಾಕೃತಿಯಲ್ಲಿ ಅಥವಾ ಎದುರುಬದರಾಗಿ ಆತನ ಬಟ್ಟೆಗಳು, ಹರಿಯಲ್ಪಟ್ಟಿದ್ದವು, ಆತನ ಕೈಗಳು ಸ್ತಂಭಾಕೃತಿಯಲ್ಲಿ ಅಥವಾ ಎದುರುಬದರಾಗಿ ಆತನ ಹಿಂದಕ್ಕೆ ಬಗ್ಗಿಸಿ ಕಟ್ಟಲ್ಪಟ್ಟಿದ್ದವು, ಆ ಬಲಿಪಶುವು ಆರು ಸಾರಿ (ಗಲ್ಲಿ ಗೇರಿಸುವವನಿಂದ) (ಚಬಕದಿಂದ) ಹೊಡೆಯಲ್ಪಟ್ಟನು, ಹೆಚ್ಚು ಕಡಿಮೆ ಈ ತೊಂದರೆದಾಯಕ ಸಾಧಕಗಳನ್ನು ಗಂಭೀರ ತೆಯು ಸೆರೆಯವನನ್ನು ಮರಣಕ್ಕೆ ನಡೆಸುವವರೆಗೂ ಇರುತ್ತಿತ್ತು. ಪ್ರತಿಯೊಂದು ಹೊಡೆತವು ಮಾಂಸವನ್ನು ಕಂಪಿಸಿ ಹರಿಯುವಂತೆ ಮಾಡುತ್ತಿತ್ತು. ನರಗಳು ಮತ್ತು ಕೆಲಸಾಲಿಕರಳುಗಳು ಕೂಡಾ ಹಾಳಗಿ ಹೊರಬೀಳುತಿತ್ತು. ಅನೇಕ ಬಾರಿ ಉಪದ್ರವ್ಯವು ಮುಖವನ್ನು ಹೊಡೆಯುತಿತ್ತು ಮತ್ತು ಕಣ್ಣನ್ನು ಮತ್ತು ಹಲ್ಲನ್ನು ಕೂಡಾ ತಟ್ಟುತ್ತಿತ್ತು. ಉಪದ್ರವವು ಹೆಚ್ಚು ಕಡಿಮೆ ಯಾವಾಗಲೂ ಮೂರ್ಛೆಬೀಳುವದರೊಂದಿಗೆ ಮತ್ತು ಕೆಲಸಾರಿ ಮರಣಿಸುವುದರೊಂದಿಗೆ ಕೊನೆಯಾಗುತ್ತಿತ್ತು.[10]

ಈ ರೀತಿಯಲ್ಲಿ ಯೇಸು ಶಿಕ್ಷಿಸಲ್ಪಟ್ಟನು. ಅದು ಸಾಕಾಗದೋ ಎಂಬಂತೆ ಹೊಡೆಯುವುದಕ್ಕೆ ಕಾರಣರಾದವರಿಂದ ಅಣಕಿಸಲ್ಪಟ್ಟನು. ಸೈನಿಕರು "ಮುಳುಬಳ್ಳಿಯಿಂದ ಕಿರೀಟವನ್ನು[11] ಹೆಣೆದು ಆತನ ತಲೆಯ ಮೇಲೆ ಇಟ್ಟು ಕೆಂಪು ಒಲ್ಲಿಯನ್ನು ಆತನಿಗೆ ಹೊದಿಸಿ[12] ಆತನ ಬಳಿಗೆ ಬಂದು ಯೆಹೂದ್ಯರ ಅರಸನೇ ನಿನಗೆ ನಮಸ್ಕಾರ! ಎಂದು ಹೇಳಿ ಆತನ

ಕೆನ್ನೆಗೆ ಏಟನ್ನು ಹಾಕಿದರು'' (ಯೋಹಾನ 19:2, 3; ನೋಡಿರಿ ಮತ್ತಾಯ 20:19).

ಈ ಮನುಷ್ಯನ ವೈರಿಗಳು ಯೇಸು ಯಾವ ರೀತಿಯ ತೊಂದರೆಯಲ್ಲಿ ಸಾಗುತ್ತಿದ್ದಾನೆ ಎಂದು ನೋಡಿದ್ದಾದರೆ, ''ಇದು ನಿಖರವಾಗಿ ಅವರನ್ನು ಶಾಂತಗೊಳಿಸಬಲ್ಲದು!'' ಎಂದು ಪಿಲಾತನು ಯೋಚಿಸಿದನು. ಹೊರಗೆ ಹೋಗುತ್ತಾ ಆತನು ''ನನಗೆ ಅವನಲ್ಲಿ ಯಾವ ಅಪರಾಧವು ಕಾಣಿಸಲಿಲ್ಲವೆಂಬುದು ನಿಮಗೆ ತಿಳಿಯುವಂತೆ ಅವನನ್ನು ನಿಮ್ಮ ಬಳಿಗೆ ತರುತ್ತೇನೆ ನೋಡಿರಿ'' ಎಂದು ಹೇಳಿದನು (ಯೋಹಾನ 19:4ಎ). ಯೇಸು ಜನರ ಮುಂದೆ ತರಲ್ಪಟ್ಟನು. ಆತನ ತಲೆಯ ಮೇಲೆ ಮುಳ್ಳಿನ ಕಿರೀಟವನ್ನು ಇಟ್ಟರು (ಯೋಹಾನ 19:5). ಮುಳ್ಳು ಆತನ ಹಣೆಗೆ ಒತ್ತಿ ರಕ್ತಧಾರೆಯು ಆತನ ಮುಖದ ಮೇಲೆ ಇಳಿಯಿತು. ಬೆನ್ನ ಮೇಲಿನ ನಿಲುವಂಗಿಯು ಹರಿದು ಚೂರಾಯಿತು (ಯೋಹಾನ 19:5), ಹರಿದ ಬೆನ್ನ ರಕ್ತದಿಂದ ತೊಯ್ದು ಹೋಯಿತು. ಯೇಸುವನ್ನು ತೋರಿ ಸುತ್ತಾ ಪಿಲಾತನು ''ಈಗೋ, ಈ ಮನುಷ್ಯನು!'' ಎಂದನು.[13]

ಉಪದ್ರವದ ಮೂಲಕವೋ ಯೆಹೂದ್ಯರ ರಕ್ತಪಿಪಾಸೆಯ ತೃಪ್ತಿಗೊಳ್ಳುವುದು ಎಂಬುದರ ಬಗೆಗೆ ದೇಶಾಧಿಪತಿಯು ಯೋಚಿಸಿದ್ದಾದರೆ, ಆತನು ನಿರಾಶನಾಗುತ್ತಿದ್ದನು. ಮಹಾಯಾಜಕನು ಮತ್ತು ಇತರ ಅಧಿಕಾರಿಗಳು ''ಕ್ರೂಜೆಗೆ ಹಾಕು ಕ್ರೂಜೆಗೆ ಹಾಕು'': ಎಂದು ಕೂಗಿದನು (ಯೋಹಾನ 19:6). ಬೇಸರಗೊಂಡ ಪಿಲಾತನು ಇದಕ್ಕೆ ಪ್ರತಿಯಾಗಿ ''ಬೇಕಾದರೆ ನೀವೇ ಅವನನ್ನು ತಕ್ಕೊಂಡು ಹೋಗಿ ಶಿಲುಬೆಗೆ ಹಾಕಿಸಿರಿ; ನನಗೆ ಅವನಲ್ಲಿ ಅಪರಾಧವು ಕಾಣಿಸಲಿಲ್ಲ''[14] ಎಂದು ಹೇಳಿದನು (ನೋಡಿರಿ ಯೋಹಾನ 19:6). ಆತನ ಧ್ವನಿಯಲ್ಲಿ ಬಹುಶಃ ವ್ಯಂಗವು ಇತ್ತು. ಯಾಕೆಂದರೆ ರೋಮನ್ನರು ಯೆಹೂದಿಗಳಿಗೆ ಕ್ರೂಜಿಸುವುದಕ್ಕೆ ಅನುಮತಿಯನ್ನು ಕೊಟ್ಟಿರಲಿಲ್ಲ ಎಂಬುದು ಆತನಿಗೂ ಗೊತ್ತಿತ್ತು ಮತ್ತು ಅವರೂ ತಿಳಿದಿದ್ದರು.

ಯೆಹೂದಿ ನಾಯಕರುಗಳು ಭಯಹುಟ್ಟಿಸುವವರಾಗಿರಲಿಲ್ಲ. ''ನಮಗೆ ಒಂದು ನೇಮವುಂಟು, ಆ ನೇಮದ ಪ್ರಕಾರ ಇವನು ಸಾಯತಕ್ಕವನು; ಯಾಕೆಂದರೆ ಅವನು ತನ್ನನ್ನು ದೇವರ ಮಗನಾಗಿ ಮಾಡಿಕೊಂಡಿದ್ದಾನೆ'' ಎಂದು ನಿರ್ದಾಕ್ಷಿಣ್ಯವಾಗಿ ಅವರು ಪಿಲಾತನ ಮೇಲೆ ಒತ್ತಡವನ್ನು ಹೆಚ್ಚಿಸಿದರು (ಯೋಹಾನ 19:7).[15] ಇನ್ನೊಂದು ಮಾತಿನಲ್ಲಿ ''ದೇಶದ್ರೋಹ ಆಪಾದನೆಯಲ್ಲಿ ನಿನಗೆ ಆತನು ನಿರಪರಾಧಿಯಾಗಿ ಕಾಣಲಿ ಬಿಡಲಿ ಯಾವ ವ್ಯತ್ಯಾಸವು ನಮಗೆ ಕಾಣಿಸದು, ಮತ್ತು ನೀನು ಆತನನ್ನು ಮರಣಕ್ಕೆ ಒಪ್ಪಿಸಲೇಬೇಕು!''

ಯೇಸು ದೇವಕುಮಾರನೆಂದು ಪ್ರತಿಪಾದಿಸಿದ್ದನ್ನು ಪಿಲಾತನು ಕೇಳಿದಾಗ (ಯೋಹಾನ 19:7), ಅವನು ಮತ್ತಷ್ಟು ಹೆದರಿಕೊಂಡನು'' (ಯೋಹಾನ 19:8). ಗ್ರೀಕ್ ಮತ್ತು ರೋಮಾ ಪುರಾಣವು ದೇವರ ಬಗೆಗೆ ಮನುಷ್ಯನ ರೂಪದಿಂದ ತೆಗೆದುಕೊಳ್ಳಲ್ಪಟ್ಟ ಅನೇಕ ದಂತಕಥೆಗಳನ್ನು ಹೊಂದಿದ್ದವು (ನೋಡಿರಿ ಅಪೊಸ್ತಲರ ಕೃತ್ಯಗಳು 14:11, 12). ಆತನು ತನ್ನ ಕೋಣೆಗೆ ಮರಳಿದನು ಮತ್ತು ತಿರುಗೊಂದಾವರ್ತಿ ಯೇಸು ಆತನ ಮುಂದೆ ತರಲ್ಪಟ್ಟನು. ನಿರ್ಣಯನಾಗಿ, ಆತನು ''ನೀನು ಎಲ್ಲಿಂದ ಬಂದವನು?'' ಎಂದು ಕೇಳಿದನು (ಯೋಹಾನ 19:9). ಇನ್ನೊಂದು ಮಾತಿನಲ್ಲಿ ''ನೀನು ಭೂಮಿನಿಂದ ಬಂದವನೋ ಅಥವಾ ಪರಲೋಕದಿಂದ ಬಂದವನೋ ಬಹುಶಃ ದೇವರು ಅವತರಿಸುವ ಒಂದು ಸ್ಥಳವೆಂದರೆ ಓಲಂಪಿಯಾ ಬೆಟ್ಟದಿಂದಲೋ?'' ಎಂದನು. ''ಆದರೆ ಯೇಸು ಅವನಿಗೆ ಉತ್ತರ ಕೊಡಲಿಲ್ಲ'' (ಯೋಹಾನ 19:9).

''ನನ್ನ ಸಂಗಡಲೂ ನೀನು ಮಾತನಾಡುವುದಿಲ್ಲವೋ? ನಿನ್ನನ್ನು ಬಿಡುಸುವ ಅಧಿಕಾರವು ನಿನ್ನನ್ನು ಶಿಲುಬೆಗೆ ಹಾಕಿಸುವ ಅಧಿಕಾರವು ನನಗೆ ಉಂಟೆಂದು ನಿನಗೆ ಗೊತ್ತಿಲ್ಲವೋ'' ಎಂದು ಪಿಲಾತನು ಆತನಿಗೆ ಉತ್ತರಕೊಡಲು ಒತ್ತಾಯಿಸಿದನು (ಯೋಹಾನ 19:10). ಯೇಸು ನಂತರ ಮಾತನಾಡಿದನು ''ಮೇಲಿನಿಂದ ನಿನಗೆ ಕೊಡಲ್ಪಡದಿದ್ದರೆ ನನ್ನ ಮೇಲೆ ನಿನಗೆ ಯಾವ ಅಧಿಕಾರವೂ ಇರುತ್ತಿರಲಿಲ್ಲ'' (ಯೋಹಾನ 19:11) ಆದರೆ ಆತನ ಉತ್ತರವು ಪಿಲಾತನ

ಮನಕ್ಕೆ ನೆಮ್ಮದಿಯನ್ನು ಕೊಡಲಿಲ್ಲ.

"ನನ್ನನ್ನು ನಿನಗೆ ಒಪ್ಪಿಸಿದವನಿಗೆ [ಅದು ಕಾಯಫನು] ಹೆಚ್ಚಿನ ಪಾಪವುಂಟು" ಎಂದು ಯೇಸು ಅದಕ್ಕೆ ಸೇರಿಸಿದನು (ಯೋಹಾನ 19:11). ಕಾಯಫನಿಗೆ ಕೊಡಲ್ಪಟ್ಟಂತೆ ಯೇಸುವಿನ ಬಗೆಗೆ ತಿಳಿಯಲು ಪಿಲಾತನಿಗೆ ಅದೇ ರೀತಿಯ ಅವಕಾಶಗಳು ಇರಲಿಲ್ಲ (ನೋಡಿರಿ ಲೂಕ 12:48). ಮುಂದೆ ಕಾಯಫನು ದ್ವೇಷಿಸಿದಂತೆ ದೇಶಾಧಿಪತಿಯು ಪ್ರೇರೇಪಿಸಲ್ಪಡಲಿಲ್ಲ. ಪಿಲಾತನು ದೋಷರಹಿತನಾಗಿರಲಿಲ್ಲ (ನೋಡಿರಿ ಅಪೊಸ್ತಲರ ಕೃತ್ಯಗಳು 4:27), ಆದರೆ ಹಿರಿಯ ಯಾಜಕನು (ಮತ್ತು ಯೆಹೂದಿಗಳು ಆತನಿಂದ ಪ್ರೇರೇಪಿತರಾಗಿದ್ದರು) ದೊಡ್ಡ ತಪ್ಪಿನಲ್ಲಿ ಇರುವವರಾಗಿದ್ದರು (ನೋಡಿರಿ ಅಪೊಸ್ತಲರ ಕೃತ್ಯಗಳು 2:23, 36; 3:13-15, 17; 5:28, 30; 7:52; 13:27, 28; 1 ಥೆಸಲೋನಿಕ 2:14, 15).

ಇದರಿಂದ ಹೊರಬಂದ ಪಿಲಾತನು ಯೇಸುವನ್ನು ಬಿಡಿಸಲೆಂದು ಒಂದು ಮಾರ್ಗವನ್ನು ಹುಡುಕಿದನು (ಯೋಹಾನ 19:12; ನೋಡಿರಿ ಲೂಕ 23:20). ಯೇಸು ರೋಮನ್ನರಿಂದ ಅಥವಾ ಯೆಹೂದಿ ಮಟ್ಟದಿಂದ ಯಾವುದೇ ತಪ್ಪನ್ನು ಮಾಡಿರಲಿಲ್ಲ. ಆದರೆ ಅದಕ್ಕಿಂತಲೂ ಹೆಚ್ಚಾಗಿ "ಮಹಾಯಾಜಕರು ಹೊಟ್ಟೆಕಿಚ್ಚಿನಿಂದ ಯೇಸುವನ್ನು ಒಪ್ಪಿಸಿಕೊಟ್ಟಿದ್ದಾರೆಂದು"[16] (ಮಾರ್ಕ 15:10) ಆತನಿಗೆ ನಿಶ್ಚಿತವಾಗಿತ್ತು. ಹೊಡೆಯಲ್ಪಡುತ್ತಾ ಇದ್ದ ಕ್ರಿಸ್ತನು ಯೆಹೂದ್ಯರನ್ನು ತೃಪ್ತಗೊಳಿಸಲಿಲ್ಲ, ಆದರೆ ಅಲ್ಲಿ ಇತರ ತಂತ್ರಗಳೂ ಇದ್ದವು.

ಏನು ಮಾಡಬೇಕೆಂದು ದೀರ್ಘಾಲೋಚನೆ ಮಾಡುತ್ತಾ ಪಿಲಾತನು ಹೊರಗಡೆ ಹಿಂದೆ ಹೋದನು.[17] ಅಲ್ಲಿ ಕಾಯುತ್ತಾ ಇದ್ದ ಗುಂಪನ್ನು ಕಂಡನು (ಮಾರ್ಕ 15:8). ಯೇಸುವಿನ ಮರಣದ ಬೇಡಿಕೆಯನ್ನು ಹೊಂದಿದ ಧರ್ಮಾಂದರ ಚಿಕ್ಕ ಗುಂಪು ಇದಾಗಿರಲಿಲ್ಲ. ರೋಮಾನ್ನರಿಂದ ಕೊಡಲ್ಪಡುತ್ತಿದ್ದ ಪಸ್ಕದ ವಿಶೇಷ ಕೊಡುಗೆಯನ್ನು ಕೇಳಲು ಬಂದ ಗುಂಪು ಇದಾಗಿತ್ತು ಅಂದರೆ ಒಬ್ಬ ಕೈದಿಯ ಬಿಡುಗಡೆ (ಮಾರ್ಕ 15:8; ಮತ್ತಾಯ 27:15; ಯೋಹಾನ 18:39).[18] ಅವರು ತಮ್ಮ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದಂತೆಯೇ, ಯೇಸುವನ್ನು ಬಿಡುಗಡೆ ಮಾಡುವ ಇನ್ನೊಂದು ಯೋಜನೆಯನ್ನು ಆತನು ಯೋಚಿಸಿದನು. ಸಾಮಾನ್ಯವಾಗಿ, ದೇಶಾಧಿಪತಿಯು ಕೈದಿ ಒಬ್ಬನ್ನು ಬಿಡುಗಡೆ ಮಾಡಲು ಯೆಹೂದಿಗಳಿಗೆ ಉಚಿತವಾದ ಆಯ್ಕೆಯನ್ನು ಕೊಡುತ್ತಿದ್ದನು (ನೋಡಿರಿ ಮತ್ತಾಯ 27:15). ಈ ಸಾರಿ, ಇಬ್ಬರು ವ್ಯಕ್ತಿಯಲ್ಲಿ ಅವರ ಆಯ್ಕೆಯನ್ನು ಮಿತಿಗೊಳಿಸಿದನು ನಿಕೃಷ್ಟನಾದ ಧರ್ಮಾಂದನು ಮತ್ತು ಯೇಸು.

"ಆ ಕಾಲದಲ್ಲಿ ಬರಬ್ಬನೆಂಬ ಪ್ರಸಿದ್ಧನಾದ ಸೆರೆಯನು ಸಿಕ್ಕಿಬಿದ್ದಿದ್ದನು"[19] (ಮತ್ತಾಯ 27:16). ಬರಬ್ಬ ಎಂಬುದರ ಅರ್ಥವು "ತಂದೆಯ ಮಗನು" ಇನ್ನೊಂದು ಅರ್ಥದಲ್ಲಿ "[ನನ್ನ] ತಂದೆಯ ಮಗನು" ಎಂದು.[20] "ಈ ಬರಬ್ಬನನ್ನು ಆ ಪಟ್ಟಣದಲ್ಲಿನ ದಂಗೆಯ ನಿಮಿತ್ತವಾಗಿಯೂ ಕೊಲೆಯ ನಿಮಿತ್ತವಾಗಿಯೂ ಸೆರೆಮನೆಯಲ್ಲಿ ಹಾಕಿದ್ದರು" (ಲೂಕ 23:19). ಬಹುಶಃ ಪಿಲಿಪ್ಪನು ಯೆರೂಸಲೇಮಿನಲ್ಲಿ ಕಾಲುವೆಯನ್ನು ನಿರ್ಮಿಸಲು ದೇವಾಲಯದ ಹಣವನ್ನು ಬಳಸಿದ್ದಕ್ಕಾಗಿ ಎದ್ದಂತ ಬಂಡಾಯದಲ್ಲಿ ಆತನು ಮುಂದಾಳು ಆಗಿರಬಹುದು.[21] ಬರಬ್ಬನು ಕಳ್ಳನೂ ಸಹ ಆಗಿದ್ದನು (ಯೋಹಾನ 18:40).[22] ಮತ್ತು ಕೊಲೆಗಾರನೂ ಆಗಿದ್ದನು[23] (ಲೂಕ 23:19ಬಿ). ಬರಬ್ಬನು ಆತರದ ವ್ಯಕ್ತಿಯಾಗಿದ್ದುದರಿಂದ ಯೋಗ್ಯರೀತಿಯ ಜನರು ಆತನನ್ನು ಸಮಾಜದಲ್ಲಿ ಸ್ವತಂತ್ರವಾಗಿಸುವುದಕ್ಕೆ ತಿರುಗಲಾರರು ಎಂದು ಪಿಲಾತನು ಯೋಚಿಸಿದ್ದಿರಬಹುದು.

ದೇಶಾಧಿಪತಿಯು ಈ ರೀತಿಯ ನಿಯಂತ್ರಿಸಲ್ಪಟ್ಟ ಆಯ್ಕೆಯನ್ನು ಕೊಟ್ಟನು: "ನಿಮಗೆ ಯಾರನ್ನು ಬಿಟ್ಟುಕೊಡಬೇಕೆನ್ನುತ್ತೀರಿ? ಬರಬ್ಬನನ್ನೋ? ಅಥವಾ ಕ್ರಿಸ್ತನೆನಿಸಿಕೊಳ್ಳುವ ಯೇಸುವನ್ನೋ?" (ಮತ್ತಾಯ 27:17; ನೋಡಿರಿ ಮಾರ್ಕ 15:9). ಬರಬ್ಬನನ್ನು ತಿರಸ್ಕರಿಸುವುದಕ್ಕೆ ಜೊತೆಯಾಗಿ, ದೇಶಾಧಿಪತಿಯದು ಹಿಂದೆ ಯೇಸು ಅನುಭವಿಸಿದ ಜನಪ್ರಿಯತೆಯನ್ನು ಸಹಾ ಎಣಿಕೆಹಾಕಿರಬಹುದು.[24]

ಯಾವ ಆಯ್ಕೆಯನ್ನು ಮಾಡಬೇಕು ಎಂದು ಜನರು ತಂತಮ್ಮಲ್ಲಿ ಮಾತನಾಡಲಾರಂಭಿಸುತ್ತಿದ್ದಂತೆಯೇ, ಪಿಲಾತನು ತನ್ನ ಯೆಹೂದಿ ಎದುರಾಳಿಗಳಲ್ಲಿ ಮೇಲಾಗಬಹುದೆಂದು ಯೋಚಿಸಿರಬಹುದು, ಆದರೆ ಆತನ ಯಾವುದೇ ಸಂತೃಪತೆಯು ಬೇಗನೇ ನಾಶವಾಗಿ ಹೋಗಿಬಿಡುತ್ತಿತ್ತು. ಆತನು ಅಲ್ಲಿ ಕುಳಿತುಕೊಳ್ಳುತ್ತಿದ್ದಂತೆಯೇ[25] "ಅವನ ಹೆಂಡತಿಯು ಆ ಸತ್ಪುರಷನ ಗೊಡವೆಗೆ ಹೋಗಬೇಡ; ಅವನ ದೆಸೆಯಿಂದ ಈ ಹೊತ್ತು ಕನಸನಲ್ಲಿ ಬಹಳ ತೊಂದರೆಪಟ್ಟೆನು ಎಂದು ಅವನ ಬಳಿಗೆ ಹೇಳಿ ಕಳುಹಿಸಿದನುಳು"[26] (ಮತ್ತಾಯ 27:19). ಇದು ಆತನನ್ನು ಅಧಿಕೃತವನ್ನಾಗಿಯೂ ಹೆಚ್ಚು ಚಡಪಡಿಸುವವನ್ನಾಗಿಯೂ ಮಾಡಿತು (ನೋಡಿರಿ ಯೋಹಾನ 19:8).

ಮಹಾಯಾಜಕರನ್ನು ಮತ್ತು ಹಿರಿಯರನ್ನು ಒಲಿಸುವಂತಹ ಅಧಿಕಾರವನ್ನು ಪಿಲಾತನು ಕೇವಲವಾಗಿ ನೋಡಿದನು. ದ್ವೇಶಕ್ಕೆ ಒಳಗಾದಂಥ ಬರಬ್ಬನು ಒಬ್ಬ ಮಾನವ ಜೀವಿ, ಒಬ್ಬ ಅಪರಾಧಿಯು ಸ್ಥಳೀಯ ಹೀರೋ ಆಗಿದ್ದವನು. ಆತನು ದ್ವೇಷಿಸಲ್ಪಟ್ಟ ರೋಮನ್ನರ ವಿರುದ್ಧ ಹೋರಾಡಿದ್ದನು. ಯಾವುದೇ ಸಂದರ್ಭದಲ್ಲಿ, "ಬರಬ್ಬನಿಗಾಗಿ ಕೇಳುವಲ್ಲಿ ಮತ್ತು ಯೇಸುವನ್ನು ಮರಣಕ್ಕೆ ಹಾಕಿಸುವಂತೆ ಕೇಳುವಲ್ಲಿ" ಯೆಹೂದಿ ನಾಯಕರುಗಳು ಗುಂಪನ್ನು ಸಮಾಜಾಯಿಸಲು ಸಮರ್ಥರಿದ್ದರು (ಮತ್ತಾಯ 27:20).

"ಅವನನ್ನು ಕೊಲ್ಲಿಸು, ನಮಗೆ ಬರಬ್ಬನನ್ನು ಬಿಟ್ಟುಕೊಡು ಎಂದು ಒಟ್ಟಾಗಿ ಕೂಗಿ!" (ಲೂಕ 23:18; ನೋಡಿರಿ ಮತ್ತಾಯ 27:21). ಗುಂಪು ಆತನಿಗೆ ತಮ್ಮ ನಿರ್ಧಾರವನ್ನು ತಿಳಿಸಿದಾಗ ದೇಶಾಧಿಪತಿಯು ಬಹುಶಃ ಆಘಾತಕ್ಕೆ ಒಳಗಾಗಿರಬಹುದು ಮತ್ತು ದಿಗ್ಭ್ರಾಂತನಾಗಿರಬಹುದು. ಕಾವಲುಗಾರರಿಂದ ಹಿಡಿಯಲ್ಪಟ್ಟವನನ್ನು ತೋರಿಸಿ ಪಿಲಾತನು ನಮ್ಮ ಎರಡು ಭಾಗದ ಪಾಠದಲ್ಲಿರಂತೆ "ಕ್ರಿಸ್ತನೆನಿಸಿಕೊಳ್ಳುವ ಯೇಸುವನ್ನು ನಾನೇನು ಮಾಡಲಿ?" ಎಂದು ಕೇಳಿದನು (ಮತ್ತಾಯ 27:22). "ಅವನನ್ನು ಶಿಲುಬೆಗೆ ಹಾಕಿಸು" ಎಂದು ತಿರುಗಿ ಕೂಗಿದರು (ಮತ್ತಾಯ 27:22; ನೋಡಿರಿ ಮಾರ್ಕ 15:12, 13; ಲೂಕ 23:21).[27]

ಅವರ ತೀರ್ಪಿನ ನ್ಯಾಯದ ಬಗ್ಗೆ ವಾದಿಸಲು ಪಿಲಾತನು ಪ್ರಯತ್ನಿಸಿದನು. ಆತನು ಅವರಿಗೆ ಮೂರನೆಯ ಸಾರಿ, "ಯಾಕೆ ಕೆಟ್ಟದ್ದೇನು ಮಾಡಿದನು. ನಾನು ಆ ಇವನಲ್ಲಿ ಮರಣದಂಡನೆಗೆ ತಕ್ಕ ಅಪರಾಧವನ್ನೇನೂ ಕಾಣಲಿಲ್ಲ" ಎಂದು ಹೇಳಿದನು (ಲೂಕ 23:22; ನೋಡಿರಿ ಮಾರ್ಕ 15:14). ಹೇಗೂ, ಆತನ ಕೇಳುಗರು ಆತನ ತೀರ್ಪಿನಲ್ಲಿ ಆಸಕ್ತಿಯನ್ನು ಹೊಂದಿರಲಿಲ್ಲ: "ಅವರು ದೊಡ್ಡ ಕೂಗಾಟ ಮಾಡುತ್ತಾ ಅವನನ್ನು ಶಿಲುಬೆಗೆ ಹಾಕಿಸಬೇಕೆಂದು ಕೇಳಿಕೊಂಡರು" (ಲೂಕ 23:23; ನೋಡಿರಿ ಮಾರ್ಕ 15:14).

ದೇವರ ಮಕ್ಕಳು ದೇವಕುಮಾರನನ್ನು[28] ತಿರಸ್ಕರಿಸುವ ಹೃದಯವಿದ್ರಾವಕ ದೃಷ್ಯವನ್ನು ನಾವು ನೋಡುತ್ತಿದ್ದಂತೆಯೇ, "ನಾವು ಆತನನ್ನು ಕ್ರೂಜೆಗೆ ಹಾಕುತ್ತೇವೆ!" ಎಂದು ಯಾರೊಬ್ಬರು ಧೈರ್ಯದಿಂದ ಹೇಳಿದ್ದನ್ನು ಎಂದಿಗೂ ನಾವು ಕೇಳಲಾರೆವು. ಹೇಗೋ "ಅವರು ತಮ್ಮ ಪಾಲಿಗೆ ದೇವರ ಮಗನನ್ನು ಪುನಃ ಶಿಲುಬೆಗೆ ಹಾಕುವವರೂ ಆತನನ್ನು ಎಲ್ಲರ ಮುಂದೆ ಅವಮಾನಿಸುವವರೂ ಆಗಿದ್ದಾರೆ" ಎಂದು ಇಬ್ರಿಯ ಪತ್ರಿಕೆಯ ಲೇಖಕನು ನಂಬಿಕೆಯಲ್ಲಿ ಬಿದ್ದು ಹೋದವರ ಬಗ್ಗೆ ಬರೆಯುವವನಾಗಿದ್ದಾನೆ (ಇಬ್ರಿಯ 6:6). ಯೇಸುವಿನ ಶಿಷ್ಯರಾದಂತಹ ನೀವು ಆತನ ವಿರುದ್ಧ ತಿರುಗಿಕೊಳ್ಳುವಂತೆ ಎಂದಾದರೂ ಶೋಧಿಸಲ್ಪಟ್ಟಿದ್ದೀರಾ? ನೀವು ಹಾಗೆ ಮಾಡಿದ್ದಾದರೆ ಆತನಿಗೆ ಹೊಸದಾಗಿ ಮೊಳೆಗಳನ್ನು ಆತನ ಕೈಗಳಿಗೆ ಮತ್ತು ಕಾಲುಗಳಿಗೆ ಮೊಳೆಗಳ ಮೂಲಕ ಚಲಿಸುವವರಾಗಿದ್ದೀರಿ. ಪೇತ್ರನು ತಿರುಗೊಂದಾವರ್ತಿ ಜಗತ್ತಿನಲ್ಲಿ ಸಿಕ್ಕಿಕೊಳ್ಳುವ ಕ್ರೈಸ್ತರಿಗೆ "ಅವರ ಅಂತ್ಯಸ್ಥಿತಿಯು ಮೊದಲಿಗಿಂತಲೂ ಕೆಟ್ಟದ್ದಾಗಿದೆ" ಎಂದು ಹೇಳುತ್ತಾನೆ (2 ಪೇತ್ರ 2:20; ನೋಡಿರಿ ವಚನಗಳು 21, 22). "ನಾನು ಆತನನ್ನು ಕೃಜೆಗೆ ಹಾಕುತ್ತೇನೆ!" ಎಂದು ನಿಮ್ಮ ಕೃತ್ಯಗಳ ಮೂಲಕ ಎಂದಿಗೂ ಹೇಳದಿರಿ.

## ಪಿಲಾತ: "ನಾನಂತೂ ತಟಸ್ಥನಾಗಿರುತ್ತೇನೆ" (ಮತ್ತಾಯ 27:24-31; ಮಾರ್ಕ 15:15-20; ಲೂಕ 23:23-25; ಯೋಹಾನ 19:12-16)

ಜನರ ಗುಂಪು ಯೇಸುವನ್ನು ಶಿಲುಬೆಗೆ ಹಾಕಿಸು ಎಂದು ಕೂಗುವುದನ್ನು ಮುಂದುವರೆಸುತ್ತಿದ್ದಂತೆಯೇ "ಅವರ ಕೂಗಾಟವು ಗೆದ್ದಿತು" (ಲೂಕ 23:23). ಯೇಸುವಿನ ಮರಣದ ಹೊರತು ಬೇರೆಯಾವದು ಯೆಹೂದ್ಯರನ್ನು ತೃಪ್ತಿಪಡಿಸದು ಎಂಬುದು ಪಿಲಾತನಿಗೆ ಹೆಚ್ಚುಹೆಚ್ಚಾಗಿ ನಿಶ್ಚಿತವಾಯಿತು.

"ನೀನು ಇವನನ್ನು ಬಿಡಿಸಿದರೆ ನೀನು ಕೈಸರನಿಗೆ ಮಿತ್ರನಲ್ಲ; ತನ್ನನ್ನು ಅರಸನನ್ನಾಗಿ ಮಾಡಿಕೊಳ್ಳುವವನು ಕೈಸರನಿಗೆ ವಿರೋಧಿ" ಎಂದು ಯೆಹೂದಿ ನಾಯಕರು ಬೊಬ್ಬೆ ಹಾಕಿದಾಗ ದೇಶಾಧಿಪತಿಯ ಅಳಿದುಳಿದ ಪ್ರತಿರೋಧ ಶಕ್ತಿಯು ಅಡಗಿಹೋಯಿತು (ಯೋಹಾನ 19:12). ಆ ಸಮಯದಲ್ಲಿ, ಕೈಸರನು ತಿಬೇರಿಯದಲ್ಲಿ ಇದ್ದನು (ನೋಡಿರಿ ಲೂಕ 3:1).[29] ತಿಬೇರಿಯದ ಆಳ್ವಿಕೆಯ ನಂತರದಲ್ಲಿ "ಕಾರಣವಿಲ್ಲದ ಅಸೂಯೆ, ಸಂಶಯಪಡುವಿಕೆ ಮತ್ತು ಕ್ರೂರತೆಯು"[30] ಚಿತ್ರಿತವಾಗಿದೆ. "*Maiestas minuta* ರಾಜನು ಸುರಕ್ಷೆಯನ್ನು ಅಲಕ್ಷಿಸಿದ್ದಕ್ಕಾಗಿ"[31] ಅನೇಕ ಅಧಿಕಾರಿಗಳು ರೋಮಕ್ಕೆ ಕರೆಸಲ್ಪಡುತ್ತಾ ಇದ್ದರು. ಪಿಲಾತನ ಸ್ಥಿತಿಯು ಉತ್ತಮತೆಯಲ್ಲಿ ಬಲು ಸೂಕ್ಷ್ಮವಾಗಿತ್ತು, ಯೆಹೂದಿಗಳು ಸಾಮಾನ್ಯವಾದ ದೂರನ್ನು ಆತನ ಮೇಲೆ ಹಾಕುವಂತ ಅಪಾಯವನ್ನು ತಂದುಕೊಳ್ಳುವ ಧೈರ್ಯವನ್ನು ಆತನು ಮಾಡಲಿಲ್ಲ.[32]

ನ್ಯಾಯತೀರ್ಪಿನ ಗದ್ದುಗೆಯ ಮೇಲೆ ಕುಳಿತು (ಯೋಹಾನ 19:13) ಅಧಿಕಾರದ ಚಿಹ್ನೆಯಾಗಿ ಪಿಲಾತನು ಯೇಸುವನ್ನು ಗುಂಪಿನ ಬಳಿಗೆ ತಿರುಗಿ ತಂದನು (ಯೋಹಾನ 19:13) ಆತನು "ಇಗೋ ನಿಮ್ಮ ಅರಸನು!" ಎಂದು ಹೇಳಿದನು (ಯೋಹಾನ 19:14). ಅವರು "ಅವನನ್ನು ಕೊಲ್ಲಿಸು ಕೊಲ್ಲಿಸು ಶಿಲುಬೆಗೆ ಹಾಕಿಸು" ಎಂದು ಕೂಗಿದರು (ಯೋಹಾನ 19:15). "ನಿಮ್ಮ ಅರಸನನ್ನು ಶಿಲುಬೆಗೆ ಹಾಕಿಸಲೋ?" ಎಂದು ಪಿಲಾತನು ಅವರನ್ನು ಕೇಳಿದನು (ಯೋಹಾನ 19:15). ಅದಕ್ಕೆ ಮಹಾಯಾಜಕನು "ಕೈಸರನೇ ಹೊರತು ನಮಗೆ ಬೇರೆ ಅರಸನಲ್ಲ" ಎಂದು ಉತ್ತರಿಸಿದನು (ಯೋಹಾನ 19:15)!

ಮನದಲ್ಲಿ ದ್ವೇಶದ ಮೋಡಗಳಿದ್ದು ಮತ್ತು ನ್ಯಾಯ ತೀರ್ಪನ್ನು ಹಾಳುಮಾಡುವಂತದ್ದಕ್ಕೆ ಎಂದಾದರೂ ನಮಗೆ ಸಾಕ್ಷಿಯು ಬೇಕೆಂದಿದ್ದರೆ ಇದೋ ಇಲ್ಲಿದೆ ಅದಕ್ಕೆ ಯೋಗ್ಯವಾದ ಉದಾಹರಣೆ: "ಕೈಸರನೇ ಹೊರತು ನಮಗೆ ಬೇರೆ ಅರಸನಲ್ಲ" ಇಸ್ರಾಯೇಲರನ್ನು ಆಳುವವನು ದೇವರಲ್ಲವೇ (ಕೀರ್ತನೆ 10:16; ಮತ್ತಾಯ 5:35)? ಬರಲಿರುವ ಮೆಸ್ಸಿಯನನ್ನು ಅವರು ಎದುರುನೋಡುತ್ತಿರಲಿಲ್ಲವೇ, ಅವರ ಅರಸನು ಯಾರಾಗಿದ್ದಾನೆ (ಜೆಕರ್ಯ 9:9; ಮತ್ತಾಯ 21:5)? ಅವರ ಹೊಟ್ಟೆಕಿಚ್ಚಿನಿಂದ ಅನುಭವಿಸುತ್ತ, ಯೆಹೂದಿ ತಾರತಮ್ಯವು ಸಾವಿರಾರು ವರ್ಷಗಳಿಂದ ಇಟ್ಟುಕೊಂಡು ಬಂದಿದ್ದ ಪರಿಶುದ್ಧ ಸತ್ಯವನ್ನು ವರ್ಜಿಸಿಬಿಟ್ಟರು.

ಈ ಎಲ್ಲಾ ಸಮಯದಲ್ಲಿ, ಗುಂಪು "ಅವನನ್ನು ಕ್ರೂಜೆಗೆ ಹಾಕು ಎಂದು ಪಠಿಸುತ್ತಲೇ ಇತ್ತು!" (ಮತ್ತಾಯ 27:23), "ಪ್ರತಿಯೊಬ್ಬ ರೋಮನ್ನನೂ ಬೆಚ್ಚಿ ಬೀಳುವ ವಿಸ್ತ್ರುತವಾದ ಕುಲಕುವ ನಾದವು ಇದಾಗಿತ್ತು, ಯಾಕೆಂದರೆ ದೊಂಬಿಯು ಅದರ ಕೇಂದ್ರದಲ್ಲಿ ಇತ್ತು."[33] ಯುದಾಯದಲ್ಲಿನ ಪಿಲಾತನ ಆಳ್ವಿಕೆಯ ಗಟ್ಟಿತನವು ಪ್ರಶ್ನಾರ್ಥಕವಾಗಿ ಕರೆಯಲ್ಪಡುತ್ತಿದ್ದರಿಂದ ಒಂದು ದೊಂಬಿಯು ಹೆಚ್ಚು ಕಡಿಮೆ ಖಚಿತವಾಗಿತ್ತು. ದೇಶಾಧಿಪತಿಯು ತನ್ನ ಭವಿಷ್ಯ ಮತ್ತು ಆ ಮುಗ್ಧ ಮನುಷ್ಯನ ಬಿಡುಗಡೆಯ ಮಧ್ಯದಲ್ಲಿ ಬೇಗನೇ ನಿರ್ಧಾರಕ್ಕೆ ಬರಬೇಕಿತ್ತು. ಇದು ಆತನನ್ನು ನಿರ್ಧಾರಕ್ಕೆ ಬಲು ಸಮಯವನ್ನು ತೆಗೆದುಕೊಳ್ಳದೆ ಹೋದರೆ ಯೇಸುವನ್ನು ಉಳಿಸಲು ಆತನು ಮಾಡಿದ ಶ್ರಮವು ವ್ಯರ್ಥವಾಗಿ ಹೋಗುತ್ತಿತ್ತು (ನೋಡಿರಿ ಮತ್ತಾಯ 27:24).

ಪಿಲಾತನು ಒಂದು ನೀರಿನ ಬಟ್ಟಲನ್ನು ತರಿಸಿದನು "ನೀರು ತಕ್ಕೊಂಡು ಜನರ ಕೈ ತೊಳಕೊಂಡು ಈ ಪುರುಷನನ್ನು ಕೊಲ್ಲಿಸಿದ್ದಕ್ಕೆ ನಾನು ಸೇರಿದವನಲ್ಲ" ಎಂದು ಹೇಳಿದನು (ಮತ್ತಾಯ 27:24). ಈ ರೀತಿಯ ಸೂಚ್ಯಾರ್ಥಕ ಕ್ರಿಯೆಗೆ ಯೆಹೂದಿಗಳು ಹೆಸರಾಗಿದ್ದರು (ಧರ್ಮೋಪದೇಶಕಾಂಡ 21:1-9; ನೋಡಿರಿ ಕೀರ್ತನೆ 26:6; 73:13).[34] ತನ್ನನ್ನು ತಾನು ಆ ಜವಾಬ್ದಾರಿಯಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿದನು; ಆದರೆ ಅಲ್ಲಿ ಉಳಿದ ವಾಸ್ತವವೆಂದರೆ, ರೋಮನ್ ದೇಶಾಧಿಪತಿಯಾದಂತಹ ಆತನು, ಅಂತಿಮ ನಿರ್ಧಾರವನ್ನು ಆತನೇ ಕೊಡ ಬೇಕಿತ್ತು. ಆತನು ಕೊಳೆಯನ್ನು ತನ್ನ ಕೈಯಿಂದ ತೊಳೆದುಕೊಳ್ಳಬಹುದಿತ್ತು ಆದರೆ ತನ್ನ ಹೃದಯದ ದೋಷವನ್ನಲ್ಲ.

"ಯೇಸುವನ್ನು ನಾನೇನು ಮಾಡಲಿ?" ಎಂಬ ಪ್ರಶ್ನೆಯಲ್ಲಿ ಕಾಣುವುದೇನೆಂದರೆ ಪಿಲಾತನು "ನಾನು ತಟಸ್ಥನಾಗಿರುತ್ತೇನೆ" ಎಂದು ಉತ್ತರಿಸಲು ಪ್ರಯತ್ನಿಸುತ್ತಿರಬಹುದು. ಇಲ್ಲಿನ ಸಮಸ್ಯೆಯೆಂದರೆ ಯೇಸುವಿನ ಬಗೆಗೆ ಯಾರೊಬ್ಬರೂ ಇಲ್ಲಿ ತಟಸ್ಥರಾಗಿರಲಿಲ್ಲ. "ನನ್ನ ಪಕ್ಷ ಹಿಡಿಯದವನು ನನಗೆ ವಿರೋಧಿ" ಎಂದು ಕ್ರಿಸ್ತನೇ ಹೇಳಿದ್ದಾನೆ (ಮತ್ತಾಯ 12:30). ಕ್ರಿಸ್ತನನ್ನು ಒಪ್ಪಿಕೊಳ್ಳುವ ನಿರ್ಧಾರದಲ್ಲಿ ವಿಫಲರಾಗುವದು ಆತನನ್ನು ತಿರಸ್ಕರಿಸುವ ನಿರ್ಧಾರವನ್ನು ಮಾಡಿದಂತೆ ಆಗಿದೆ. "ನನ್ನನ್ನು ಲಕ್ಷ ಮಾಡದೇ ನನ್ನ ಮಾತುಗಳನ್ನು ಅಂಗೀಕರಿಸದೆ ಇರುವವನಿಗೆ ತೀರ್ಪುಮಾಡುವಂಥದ್ದು ಒಂದು ಇದೆ ಅದು ಯಾವುದೆಂದರೆ ನಾನು ಆಡಿದ ಮಾತು; ಅದೇ ಅವನಿಗೆ ಕಡೇ ಆ ದಿನದಲ್ಲಿ ತೀರ್ಪುಮಾಡುವದು" (ಯೋಹಾನ 12:48). ಕರ್ತನು ಬಗ್ಗೆ ನೀನು ನಿನ್ನ ನಿರ್ಧಾರವನ್ನು ಕೈಕೊಳ್ಳುವಾಗ ತಟಸ್ಥನಾಗಿ ಉಳಿಯುವದು ಅದು ಒಂದು ಆಯ್ಕೆಯಲ್ಲ.

ಮರಣದಂಡನೆಗೆ ಯೇಸುವಿನ ದೋಷರಹಿತತೆಯ ಬಗೆಗೆ ಪಿಲಾತನು ಪ್ರತಿಪಾದಿಸಿದ ನಂತರ, ಆತನು ಗುಂಪಿಗೆ "ನೀವೇ ನೋಡಿಕೊಳ್ಳಿರಿ" ಅಂದನು (ಮತ್ತಾಯ 27:24). "ಅವನನ್ನು ಕೊಲ್ಲಿಸಿದ್ದಕ್ಕೆ ನಾವೂ ನಮ್ಮ ಮಕ್ಕಳೂ ಉತ್ತರಕೊಡುತ್ತೇವೆ" ಎಂದು ಅವರು ಪ್ರತಿಕ್ರಯಿಸಿದರು (ಮತ್ತಾಯ 27:24). "ಅವನನ್ನು ಕೊಲ್ಲಿಸಿದ್ದಕ್ಕೆ ನಾವು ಮಕ್ಕಳೂ ಉತ್ತರಕೊಡುತ್ತೇವೆ!" ಎಂದು ಅವರು ಪ್ರತಿಕ್ರಯಿಸಿದನು (ಮತ್ತಾಯ 27:25). ಈ ಮಾತುಗಳ ಮೂಲಕ, ಯೆಹೂದಿಗಳು ದೇವರ ನಿಜಪುತ್ರನನ್ನು ಕೊಲ್ಲಿಸುವುದರ ಮೂಲಕ ನಿಜದೋಷವನ್ನು ಸ್ವತ ತಾ-ವ್ ಒಪ್ಪಿಕೊಂಡರು.[35]

"ಜನರ ಮನಸ್ಸನ್ನು ಸಮಾಧಾನಪಡಿಸಬೇಕೆಂದು" (ಮಾರ್ಕ 15:15) ಪಿಲಾತನು ಕೊನೆಯಲ್ಲಿ "ನೀವು ಕೇಳಿಕೊಂಡಂತೆಯೇ ಆಗಲಿ ಎಂದು ನಿರ್ಣಯಿಸಿ ದಂಗೆ ಕೊಲೆಗಳ ನಿಮಿತ್ತವಾಗಿ ಸೆರೆಮನೆಯಲ್ಲಿ ಬಿದ್ದ ಆ ಮನುಷ್ಯನನ್ನು ಅವರು ಕೇಳಿಕೊಳ್ಳುತ್ತಿದ್ದ ಪ್ರಕಾರ ಬಿಟ್ಟುಕೊಟ್ಟ ಯೇಸುವನ್ನು ಅವರ ಚಿತ್ತಾನುಸಾರ ಒಪ್ಪಿಸಿದನು" (ಲೂಕ 23:24, 25). ನಂತರ ಆತನು ಯೇಸುವನ್ನು "ಶಿಲುಬೆಗೆ ಹಾಕುವುದಕ್ಕೆ" ಒಪ್ಪಿಸಿಕೊಟ್ಟನು (ಮತ್ತಾಯ 27:26).[36]

ಇಬ್ರಿಯ ಮಾತಿನಲ್ಲಿ ಗಬ್ಬಥಾಯೆನಿಸಿಕೊಳ್ಳುವ ಕಲ್ಲು ಹಾಸಿನ ಕಟ್ಟೆಯ ಎಂಬ ಹೆಸರುಳ್ಳ ನ್ಯಾಯ ಪೀಠ[37] ಎಂದು ಇತಿಹಾಸ ಬದಲಾಯಿಸಿದ ತೀರ್ಪಿನ ಸ್ಥಳವನ್ನು ಯೋಹಾನನ್ನು ಗುರುತಿಸಿದ್ದಾನೆ (ಯೋಹಾನ 19:13).[38] "ಪಸ್ಕ ಹಬ್ಬದ ಸೌರಣೆಯ ದಿನವಾಗಿತ್ತು" ಎಂದು ಅಪೊಸ್ತಲರೂ ಕೂಡ ಗಮನಿಸಿದ್ದಾರೆ (ಯೋಹಾನ 19:14). ಸಂದರ್ಭವನ್ನು ನೋಡಿ ದಲ್ಲಿ, ಈ ಪದವು ಎಂಟು ದಿನ ಹಬ್ಬದ ಮೊದಲು ಬರುತ್ತಿದ್ದ ಸಬ್ಬತ್ತಿಗಾಗಿನ ಸಿದ್ಧತೆಯನ್ನು ಸೂಚಿಸುವುದಾಗಿದೆ (ನೋಡಿರಿ ಯೋಹಾನ 19:31; ಮಾರ್ಕ 15:42; ಲೂಕ 23:54). ಯೋಹಾನನು "ಹೆಚ್ಚು ಕಡಿಮೆ ಆರು ಘಂಟೆಯಾಗಿತ್ತು" ಎಂದು ಸಮಯವನ್ನು ಕೂಡಾ ಸೂಚಿಸಿದ್ದಾನೆ (ಯೋಹಾನ 19:14). ಯೋಹಾನನು ಸ್ಪಷ್ಟವಾಗಿ ರೋಮನ್ ಸಮಯದ ಎಣಿಕೆಯನ್ನು ಬಳಸಿದ್ದಾನೆ.[39] ಎಣಿಸುವ ಸಮಯದಲ್ಲಿ "ಆರು ಘಂಟೆ"ಯು ಬಹುಶಃ

ಪ್ರಾಥಕಾಲದ 6 ಘಂಟೆಯ ಸಮಯವಾಗಿರಬಹುದು. ಯೋಹಾನನು "ಹೆಚ್ಚುಕಡಿಮೆ ಆರು ಘಂಟೆಯಾಗಿತ್ತು" ಎಂದು ಹೇಳಿದ್ದರಿಂದ; ಇದು ಸ್ವಲ್ಪ ಸಮಯದ ನಂತರ ಇರಬೇಕು. ಆದರೆ ಪಿಲಾತನು ಜನರಿಗೆ ಒಪ್ಪಿಸಿಕೊಟ್ಟಾಗ ಅದು ಇನ್ನೂ ದಿನ ಆರಂಭವಾಗಿತ್ತು.

ಪಿಲಾತನು ಯೇಸುವನ್ನು ಶಿಲುಬೆಗೆ ಹಾಕಲಿರುವ ತನ್ನ ಸೈನಿಕರತ್ತ ತಿರುಗಿದನು. ಆತನನ್ನು ಶಿಲುಬೆಗೆ ಹಾಕಲು ಮತ್ತು ಮರಣಿಸಬೇಕಾಗಿರುವ ಇಬ್ಬರನ್ನು ಶಿಲುಬೆಗೆ ಹಾಕಲು ಇತರ ವ್ಯವಸ್ಥೆಯನ್ನು ಮಾಡಲು ಸಮಯ ಬೇಕಾಗುತ್ತಿತ್ತು (ನೋಡಿರಿ ಮಾರ್ಕ 15:25).[40] ಈಗಷ್ಟೆ ಪ್ರಾರಂಭವಾದ "ಆಟದ" ವಿರಾಟರೂಪವನ್ನು ಆ ದೊಡ್ಡ ದಂಡು ಆ ಸಮಯದಲ್ಲಿ ಹಾದುಹೋಗಿತ್ತು.[41] ಈ ಸಾರಿ, "ಸಮಸ್ತ ಸಿಪಾಯಿದಾಳವು" ಕರ್ತನನ್ನು ಮೂದಲಿಸಿತು ಮತ್ತು ಪರಿಹಾಸ್ಯಮಾಡಿತು (ಮಾರ್ಕ 15:16-19; ಮತ್ತಾಯ 24:27-30 ಸಹ ನೋಡಿರಿ).

ಅಂತಿಮವಾಗಿ ಮರಣದಂಡನೆಗೆ ಎಲ್ಲವೂ ಸಿದ್ಧವಾಯಿತು. ಸೈನಿಕರು "[ಯೇಸುವಿನ] ಬಟ್ಟೆಗಳನ್ನು ಹೊದಿಸಿ ಆತನನ್ನು ಶಿಲುಬೆಗೆ ಹಾಕುವುದಕ್ಕೆ ತೆಗೆದುಕೊಂಡು ಹೋದರು" (ಮತ್ತಾಯ 27:31).

## ಮುಕ್ತಾಯ

ಎರಡು ಭಾಗದ ನಮ್ಮ ಪಾಠದ ಕ್ರಮದಲ್ಲಿ, "ಯೇಸುವನ್ನು ನಾನೇನು ಮಾಡಬೇಕು?" ಎಂಬ ಪ್ರಶ್ನೆಗೆ ಅನೇಕ ಉತ್ತರಗಳು ಕೊಡಲ್ಪಟ್ಟಿರುವುದನ್ನು ನಾವು ಕಂಡಿದ್ದೇವೆ.

- ಯೂದನು: "ನಾನು ಅವನನ್ನು ಮಾರುತ್ತೇನೆ."
- ಪೇತ್ರ: "ನಾನು ಅವನನ್ನು ನಿರಾಕರಿಸುತ್ತೇನೆ."
- ಮಹಾಸಭೆ: "ನಾವು ಅವನನ್ನು ಶಪಿಸುತ್ತೇನೆ."
- ಹೆರೋದ: "ನಾನು ಕೇವಲ ಕುತೂಹಲವುಳ್ಳನಾಗಿರುತ್ತೇನೆ."
- ಜನರ ಗುಂಪು: "ನಾವು ಆತನನ್ನು ಕ್ರೂಜೆಗೆ ಹಾಕುತ್ತೇವೆ."
- ಪಿಲಾತ: "ನಾನು ತಟಸ್ಥನಾಗಿರುತ್ತೇನೆ."

ಈ ಜನರು ಯಾಕೆ ಈ ರೀತಿಯಲ್ಲಿ ತಾವು ಮಾಡಿದ್ದನ್ನು ಪ್ರತಿಕ್ರಯಿಸಿದರು? ಯೂದನು ಯಾಕೆ ಸೈತಾನನಿಗೆ ಒಳಪಟ್ಟನು (ನೋಡಿರಿ ಲೂಕ 22:3; ಯೋಹಾನ 13:27). ಪೇತ್ರನು ಪ್ರತ್ಯಕ್ಷವಾಗಿ ಭಯಕ್ಕೆ ಒಳಗಾದನು. ಮಹಾಸಭೆಯು ವೈರತ್ವ ಮತ್ತು ಪೂರ್ವಾ ಗ್ರಹಕ್ಕೆ ಒಳಹಾಯಿತು (ಮಾರ್ಕ 15:10). ಹೆರೋದನು ನಾಸ್ತಿಕ ಸ್ವಭಾವಕ್ಕೆ ಒಳಗಾದನು. ಜನರ ಗುಂಪು ಅದರ ಹಠದ ಸ್ವಭಾವ ನಾಯಕರಿಗೆ ಒಳಗಾಯಿತು. ಪಿಲಾತನು ಗುಂಪಿಗೆ ಒಳಗಾದನು (ಮಾರ್ಕ 15:15).[42] ದುರ್ದೈವಶಾತ್ ಇವರಲ್ಲಿ ಯಾರೊಬ್ಬರು ದೇವರಿಗೆ ಒಳಗಾಗಲಿಲ್ಲ (ನೋಡಿರಿ ರೋಮಾಪುರ 6:13; KJV).[43]

"ಯೇಸುವನ್ನು ನಾನೇನು ಮಾಡಬೇಕು?" ಯಾವ ಉತ್ತರವನ್ನು ನೀವು ಕೊಡಬೇಕಾಗುವದು? ಯಾವ ಉತ್ತರವನ್ನು ನಿಮ್ಮ ಆತ್ಮವನ್ನು ರಕ್ಷಿಸುವದು ಮತ್ತು ನಿಮ್ಮ ಜೀವಿತವನ್ನು ಆಶೀರ್ವದಿಸುವದು? ಸರಿಯಾದ ಉತ್ತರವು ಪಂಚಾಶತ್ತಮದಿಂದಂದು "ಮೂರು ಸಾವಿರ ಜನರು ನಾವು ಆತನನ್ನು ಅಂಗೀಕರಿಸುತ್ತೇವೆ - ಮತ್ತು ಆತನಿಗೆ ವಿಧೇಯರಾಗಿರುತ್ತೇವೆ!" ಎಂದಾಗ ಕೊಡಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 2:37, 38, 41).

"ಯೇಸುವನ್ನು ನಾನೇನು ಮಾಡಬೇಕು?" ಎಂಬ ಪ್ರಶ್ನೆಗೆ ನೀವು ಉತ್ತರಿಸಬೇಕಾದ ಸಮಯವು ಈಗ ಬಂದಿದೆ. ನಿಮ್ಮನ್ನು ನೀವು ಕರ್ತನಿಗೆ ಒಳಪಡಿಸುವುದಕ್ಕೆ ನಾನು ಪ್ರಾರ್ಥಿಸುವವನಾಗಿದ್ದೇನೆ, ಮತ್ತು ನಿಮ್ಮ ಉತ್ತರವು ಪಂಚಾಶತ್ತಮದಿನದಂದು ಆ ಯೆಹೂದ್ಯರ ಉತ್ತರವು ನಿಮ್ಮದು ಆಗಿರಲಿ. ಆತನನ್ನು ದೇವರ ಮಗನೆಂದು ಅಂಗೀಕರಿಸಿರಿ ಮತ್ತು ಆತನ ಚಿತ್ತವನ್ನು ಮಾಡಿರಿ!

## ಮಾಹಿತಿ

ಯೇಸುವಿನ ಪರೀಕ್ಷೆಯ ಮೇಲಿನ ಪ್ರಸಂಗದ ವೀಕ್ಷಣೆಯು ಈ ಪುಸ್ತಕದಲ್ಲಿ ನಂತರದಲ್ಲಿ ಕಂಡುಬರುತ್ತದೆ.

ಪಿಲಾತನ ಮೇಲಿನ ವ್ಯಕ್ತಿ ಮೇಲಿನ ಪ್ರಸಂಗಕ್ಕೆ ಯೋಗ್ಯವಾಗಿದೆ: "ತನ್ನ ಜವಾಬ್ದಾರಿಯನ್ನು ಹಸ್ತಾಂತರಿಸುವ ವ್ಯಕ್ತಿ" ತಮ್ಮ ತಪ್ಪಿಗಾಗಿ ಮತ್ತು ತಪ್ಪಾದ ಕಾರ್ಯಕ್ಕಾಗಿ ತಮ್ಮನ್ನು ಬಿಟ್ಟು ಪ್ರತಿಯೊಂದನ್ನೂ ಮತ್ತು ಪ್ರತಿಯೊಬ್ಬರನ್ನು ಅಂದರೆ ಸಮಾಜವನ್ನು, ಪೋಷಕರನ್ನು, ಸಮಪಾಠಿಗಳನ್ನು, ಕೆಟ್ಟ ಸಂಗಾತಿಗಳನ್ನು, ಮಧ್ಯ ಡ್ರಗ್ಸ್ ಮತ್ತು ಇನ್ನೇನೋ ಇವನ್ನು ದೂಷಿಸುತ್ತಾ ಇಂದು ಅನೇಕರು ಜವಾಬ್ದಾರಿಯ "ಕೈಗಳನ್ನು ತೊಳೆದುಕೊಳ್ಳಲು" ಅನೇಕರು ಪ್ರಯತ್ನಿಸುತ್ತಾರೆ. ಪಿಲಾತನ ಮೇಲೆ ಎರಡು ಭಾಗದಲ್ಲಿ ಮತ್ತು ಆತನ ಮೇಲಿನ ಉಪಲೇಖನದ ವಿಷಯಗಳಲ್ಲಿ ನೀವು ಗಣನೀಯವಾದದ್ದನ್ನು ಕಂಡುಕೊಳ್ಳಬಹುದು.

Neal Pollard ರವರು ಇನ್ನೊಂದನ್ನು ಅಧಿಕೃತ ಪ್ರಸಂಗಕ್ಕಾಗಿ ಇನ್ನೊಂದು ತಲುಪುವಿಕೆಯನ್ನು ಅಭಿವೃದ್ಧಿಸಿದ್ದಾರೆ ಅದು "ಪಿಲಾತನ ತಪ್ಪುಗಳು"[44] ಅವರು ನಾಲ್ಕು ತಪ್ಪುಗಳನ್ನು ಹೆಸರಿಸಿದ್ದಾರೆ: (1) ಪಿಲಾತನು ತನ್ನ ಜವಾಬ್ದಾರಿಯನ್ನು ಇನ್ನೊಬ್ಬರಿಗೆ ವರ್ಗಾಯಿಸಿದನು (ಲೂಕ 23:5-7), (2) ಕೆಟ್ಟತನದೊಡನೆ ರಾಜಿಮಾಡಿಕೊಳ್ಳಲು ಆತನು ಯತ್ನಿಸಿದನು (ಲೂಕ 23:13-16), (3) ತಾನು ಪರಿಸ್ಥಿತಿಯ ಬಗ್ಗೆ ತನ್ನ ಕೈಯನ್ನು ತೊಳೆದುಕೊಳ್ಳಬಹುದು ಎಂದು ಆತನು ಯೋಚಿಸಿದನು (ಮತ್ತಾಯ 27:24), ಮತ್ತು (4) ಆತನು ಬಿಟ್ಟುಕೊಟ್ಟನು (ಮತ್ತಾಯ 27:26). ನೀವು ಪಟ್ಟಿಗೆ ಸೇರಿಸಬಹುದು.

ಅಂತಿಮವಾದ ವಿಚಾರವು ಇಲ್ಲಿದೆ: ಪಿಲಾತನ ವ್ಯಕ್ತಪಡಿಸುವಿಕೆಯಾದ "ಇದೋ ಆ ಮನುಷ್ಯನು!" (ಯೋಹಾನ 19:5) ಇದು ಯೇಸುವಿನ ಬಗ್ಗೆ ವಿವರಣೆಯನ್ನು ಸೂಚಿಸುವದಕ್ಕೆ ಮರಣವನ್ನು ಪರಿಚಯಿಸುವುದಕ್ಕೆ ಬಳಸಲ್ಪಡಬಹುದಾಗಿದೆ.

---

ಟಿಪ್ಪಣಿಗಳು

[1]ಹಬ್ಬದ ಸಮಯದಲ್ಲಿ ಶಾಂತಿಯನ್ನು ಕಾಪಾಡಲೆಂದು ಪಿಲಾತನು ಯೆರೂಸಲೇಮಿನಲ್ಲಿ ಇದ್ದನು; ಯೆಹೂದ್ಯರನ್ನು ಸಂತುಷ್ಟಗೊಳಿಸಲು ಹೆರೋದನು ಕೂಡ ಅಲ್ಲಿದ್ದನು ಎಂಬ ಸಂಗತಿಯಲ್ಲಿ ಸಂಶಯವೇ ಇಲ್ಲ. [2]ಹೆರೋದನೊಡನೆ ಒಳ್ಳೆಯ ಸಂಬಂಧವನ್ನು ಇಟ್ಟುಕೊಳ್ಳಲು ಪಿಲಾತನಿಗೆ ಇದೊಂದು ಅವಕಾಶವಾಯಿತು: "ಹೆರೋದನು ತಿಬೇರಿಯದ ಚಕ್ರವರ್ತಿಯಾಗಿದ್ದನು [Josephus *Antiquities of the Jews*18.2.3ä 18.4.5]" (Bruce Corley, "Trial of Jesus," *Dictionary of Jesus and the Gospels,* eds. Joel B. Green and Scot McKnight [Downers Grove, Ill.: InterVarsity Press, 1992], 848). ಪಿಲಾತ ಮತ್ತು ಹೆರೋದರು ಯಾಕೆ ವೈರಿಗಳಾಗಿದ್ದರೆಂಬುದಕ್ಕೆ ಈ ಪುಸ್ತಕದಲ್ಲಿ ನಂತರದಲ್ಲಿ ಸಿಕ್ಕುವ ಪಿಲಾತನ ಮೇಲಿನ ಉಪಲೇಖನವನ್ನು ನೋಡಿರಿ. [3]ಅವರು ಯೇಸುವನ್ನು ಯಾಕೆ ಒಯ್ದರು ಎಂಬುದರ ಬಗ್ಗೆ ನಮಗೆ ಯಾವ ಖಚಿತತೆಯು ಇಲ್ಲ Praetorium ಕ್ಯಾಸಲ್ ಅಂತೋನಿಯಾದಲ್ಲಿ ಇದ್ದದ್ದಾದರೆ ಹೆರೋದನು ತನ್ನ ತಂದೆಯಿಂದ ಪಟ್ಟಣದ ಪಶ್ಚಿಮಭಾಗದಲ್ಲಿ ಕಟ್ಟಲ್ಪಟ್ಟ ಅರಮನೆಯಲ್ಲಿ ಆತನು ಬಹುಶಃ ಇರಬೇಕಾಗಿತ್ತು. ಪಿಲಾತನ Praetorium ಚಕ್ರವರ್ತಿ ಹೆರೋದನ ಅರಮನೆಯಾಗಿದ್ದಾದರೆ, ಹೆರೋದನು ಎಲ್ಲಿ ಇರುತ್ತಿದ್ದನು ಎಂಬುದರ ಬಗ್ಗೆ ಯಾವ ಖಚಿತತೆಯು ಇಲ್ಲ. [4]ಸಂಪೂರ್ಣ ಜವಾಬ್ದಾರಿಯನ್ನು ತಮ್ಮ ಮೇಲೆ ತೆಗೆದುಕೊಳ್ಳುವ ವ್ಯಕ್ತಿಗಳನ್ನು ಪ್ರಾಚೀನ ಅರಸರು ಹೊಂದಿರುತ್ತಿದ್ದರು. ಈ ಮನುಷ್ಯರು ಆಡಂಬರದ ಪೋಷಕನ್ನು ಧರಿಸುತ್ತಿದ್ದ ಅವರನ್ನು "ವಿದೂಷಕರು" ಅಥವಾ "ಹಾಸ್ಯಗಾರರು" ಎಂದು ಕರೆಯುತ್ತಿದ್ದರು. ಮನರಂಜಿಸಲು ಅವರು ನಗೆಹನಿಯನ್ನು, ಹಾಸ್ಯಭರಿತವಾದ ಹಾಡುಗಳನ್ನು ಮತ್ತು ಕೀಳಾದ ನಾಟಕಗಳನ್ನು ಮಾಡುವುದನ್ನು ಒಳಗೊಂಡಂಥ ಪದ್ದತಿಗಳನ್ನು ಅವರು ನಗೆಹನಿಯನ್ನು, ಹಾಸ್ಯಭರಿತವಾದ ಹಾಡುಗಳನ್ನು ಮತ್ತು ಕೀಳಾದ ನಾಟಕಗಳನ್ನು ಮಾಡುವುದನ್ನು ಒಳಗೊಂಡಂಥ ಪದ್ಧತಿಗಳನ್ನು ಅವರು ಬಳಸುತ್ತಿದ್ದರು. ಕೆಲವರು ಸರಳವಾದ ಇಂದ್ರಜಾಲದ ಕಣ್ಕಟ್ಟು ಮಾಡುವ ಕೆಲ ಕೌಶಲ್ಯಗಳನ್ನು ಕೂಡಾ ಮಾಡುತ್ತಿದ್ದರು. [5]ಲೂಕ 23:11ರ "ಕಣ್ಣುಕುಕ್ಕುವ ನಿಲುವಂಗಿ" ಹೆರೋದನ ನಿಲುವಂಗಿಗಳಲ್ಲಿ

ಒಂದಾಗಿರಬೇಕು. ಇದು ಯೇಸುವಿನ ಮೇಲೆ ಹಾಕಿದ್ದು ಆತನನ್ನು ಅಣುಕಿಸಲು. [6]ಅಪೊಸ್ತಲರ ಕೃತ್ಯಗಳು 4:27 ಹೆರೋದನು ಯೇಸುವನ್ನು ನೋಡಿಕೊಳ್ಳುವುದರ ಬಗ್ಗೆ ಸೂಚಿಸುತ್ತಿರಬಹುದು. [7]ಹೆರೋದನು ಯೇಸುವನ್ನು ದೂಷಿಸಲಿಲ್ಲ, ಆದರೆ ಆತನನ್ನು ಹಿಂದಕ್ಕೆ ಕಳುಹಿಸಿದ್ದರಿಂದ ಅರಸನು ಆಪಾದನೆಯನ್ನು ತೆಗೆದುಹಾಕಿದ್ದಾನೆ ಎಂಬುದು ಪಿಲಾತನ ಸ್ಪಷ್ಟವಾದ ತಿಳುವಳಿಕೆಯಾಗಿತ್ತು. [8]W. E. Vine, Merrill F. Unger, and William White, Jr., "*paideuo*," *Vine's Complete Expository Dictionary of Old and New Testament Words* (Nashville: Thomas Nelson Publishers, 1996), 97. [9]ಯೆಹೂದಿ ನಾಯಕರು ಶಾಂತಗೊಳಿಸುವ ಪಿಲಾತನ ಶ್ರಮದ ಭಾಗವಾಗಿರುವಂತ ದೊಂಬಿಯು ಆ ಸಮಯದಲ್ಲಿತ್ತೇ ಅಥವಾ ಅದು ನಂತರದಲ್ಲಿ ಅಂದರೆ ಮರಣದಂಡನೆಯ ಭಯಂಕರತೆಯ ಭಾಗವಾಗಿ ಕ್ರೂಗಿಸಿದ ನಂತರದಲ್ಲಿ ಸಂಭವಿಸಿತೇ ಎಂಬುದು ಅಸ್ಪಷ್ಟವಾಗಿದೆ. [10]J. W. Shepard, *The Christ of the Gospels* (Grand Rapids, Mich.: Wm. B. Eerdmans Publishing Co., 1939), 589. William D. Edwards, Wesley J. Gabel, and Floyd E. Hosmer, "On the Physical Death of Jesus Christ," *Journal of the American Medical Association* (21 March 1986): 1457–58 ಚಿತ್ರಾತ್ಮಕ ವಿವರಣೆಯು ಇರುವುದಾಗಿದೆ.

[11]ಈ ಕಿರೀಟವು ಎಂಥ ವಿವಿಧ ರೀತಿಯ ಸ್ಥಳೀಯ ಮುಳ್ಳಿನ ಕಂಟಿಗಳಿಂದ ಮಾಡಲ್ಪಟ್ಟಿತ್ತು ಎಂಬುದರ ಬಗ್ಗೆ ನಮಗೆ ತಿಳಿಯದು. ಇದು ಉದ್ದಮುಳ್ಳಿನ ಸಂಪ್ರದಾಯ ಹೊಂದಿದ ಕಾಡುಗುಲಾಬಿಯ ಎರಡು ಇಂಚು ಉದ್ದವಿರುವ ಮುಳ್ಳುಗಳಿಂದ ಮಾಡಲ್ಪಟ್ಟಿತ್ತು ಎಂದು ನಂಬುತ್ತಾರೆ. ನಾನು ನನ್ನ ಬೋಧನೆಯಲ್ಲಿ ಮುಳ್ಳಿನ ಕಿರೀಟವನ್ನು ಬೋಧನೋಪಕರಣಕ್ಕಾಗಿ ಬಳಸಿದಾಗ ನಾನು ಕಂಡುಕೊಂಡಂತೆ ಆ ಕಿರೀಟವು ಬಹುವಾಗಿ ನೋವನ್ನು ಉಂಟುಮಾಡುವ ರೀತಿಯ ಮುಳ್ಳುಗಳಿಂದ ಮಾಡಲ್ಪಟ್ಟಿತ್ತು. [12]ಈ "ಕಣ್ಣುಕುಕ್ಕುವ ನಿಲುವಂಗಿಯು"ಯನ್ನು ಯೇಸುವಿನ ಮೇಲೆ ಹಾಕಿದ್ದು ಹೆರೋದನಿಂದ ಇರಬೇಕು ಅಥವಾ ಸನ್ಯದಳಕ್ಕೆ ಸಂಬಂಧಿಸಿದಂತೆ ಇರುವಂಥದ್ದೂ ಕೂಡಾ ಆಗಿರಬಹುದು. [13]ಸಾಮಾನ್ಯವಾಗಿ ಪಿಲಾತನು ಯೇಸುವನ್ನು "ಅರಸ" ಎಂಬ ಪದದಿಂದ ಸೂಚಿಸುತ್ತಿದ್ದುದರಿಂದ (ನೋಡಿರಿ ಮಾರ್ಕ 15:9, 12; ಯೋಹಾನ 18:39). "ಮನುಷ್ಯನು" ಎಂದು ಬಳಸಿದ್ದು ಬಹುಶ ಮಹತ್ವದ್ದಾಗಿರಬಹುದು. "ಇತರ ಮನುಷ್ಯರಂತೆ ಈತನೂ ಕೂಡಾ ರಕ್ತ ಸುರಿಸುವವನಾಗಿದ್ದಾನೆ ನೋಡಿರಿ! ನೀವು ಚಿಂತಿಸುವಂತೆ ಆತನು ಯಾರೊಬ್ಬನೂ ಅಲ್ಲ." ಎಂದು ಪಿಲಾತನು ಯೆಹೂದಿಗಳಿಗೆ ಹೇಳುತ್ತಿರಬಹುದು. [14]ಗ್ರೀಕ್ ವೇದಭಾಗದಲ್ಲಿ "ನಿನಗೋಸ್ಕರ" ಮತ್ತು "ನಾನು" ಎಂಬ ಪದಗಳು ಖಡಾಖಂಡಿತವಾಗಿ ಹೇಳುವವು ಆಗಿವೆ. [15]ನಂತರ ಯೆಹೂದಿ ನಾಯಕರು ಒಳಸಂಚಿನ ಆಪಾದನೆಯತ್ತ ತಿರುಗಿದರು (ಯೋಹಾನ 19:12); ಒಂದು ಕ್ಷಣ ಅವರು ರಾಜಕೀಯ ಆಪಾದನೆಯನ್ನು ಪರಿತ್ಯಜಿದರು ಮತ್ತು ತಾವು ದೋಷಿಸಿದಂತೆ ಧಾರ್ಮಿಕ ದೋಷದ (ದೇವ ದೂಷಣೆ) ಆಪಾದನೆಯನ್ನು ಯೇಸುವಿನ ಮೇಲೆ ಹೋರಿಸಿದರು. [16]ವಿಜಯಾತ್ಮಕ ಪ್ರವೇಶದ ಜ್ಞಾನ ಮತ್ತು ಯೇಸು ಮಂಗಳವಾರ ದೇವಾಲಯದಲ್ಲಿ ಚರ್ಚೆಯಲ್ಲಿ ಯೆಹೂದಿ ನಾಯಕರನ್ನು ಸೋಲಿಸಿದ್ದನ್ನು ಇದು ಸೂಚಿಸುವುದಾಗಿರಬಹುದು. [17]ಪ್ರತ್ಯಕ್ಷವಾಗಿ ಆ ಕ್ಷಣಕ್ಕೋಸ್ಕರ, ಆತನು ಒಳಗಡೆ ಯೇಸುವನ್ನು ಅವರ ವಶದಲ್ಲಿ ಬಿಟ್ಟನು (ಯೋಹಾನ 19:13). [18]ಪಿಲಾತನು "ನಿಮ್ಮ ಸಂಪ್ರದಾಯದ ಪ್ರಕಾರ ..." ಎಂದು ಯೆಹೂದ್ಯರಿಗೆ ಹೇಳಿದನು (ನೋಡಿ ಯೋಹಾನ 18:39). ಪಿಲಾತನು ತಾನೇ ಆ ಸಂಪ್ರದಾಯವನ್ನು ಹುಟ್ಟಿಹಾಕಿಲ್ಲ, ಆದರೆ ಅದು ಹಿಂದಿನ ರೋಮ ಅಧಿಕಾರಗಳಿಂದ ಪ್ರಾರಂಭವಾಗಿತ್ತು ಎಂದು ಸೂಚಿಸುತ್ತಿರಬಹುದು. ಯೆರೂಸಲೇಮಿನಲ್ಲಿ ಆ ದಿನಗಳಲ್ಲಿ ಈ ಸಂಪ್ರದಾಯಕ್ಕೆ ಯಾವುದೇ ರೀತಿಯ ಐತಿಹಾಸಿಕ ದಾಖಲೆಯು ಅಸ್ತಿತ್ವದಲ್ಲಿ ಇರಲಿಲ್ಲ, ಆದರೆ ಒಳ್ಳೆಯ ನಡವಳಿಕೆಯನ್ನು ಹೊಂದಿದ್ದಕ್ಕೆ ಕೈದಿಗಳನ್ನು ರಾಜಕೀಯ ನಾಯಕರುಗಳು ಬಿಡುಗಡೆ ಮಾಡುವದು ಇಂದೂ ಅಸಹಜವಾದದ್ದೇನೂ ಅಲ್ಲ. [19]ಒಂದು ಪ್ರಾಚೀನ ಹಸ್ತಪ್ರತಿನ ಪ್ರಕಾರ ಆತನ ಸಂಪೂರ್ಣ ಹೆಸರು "ಯೇಸು ಬರಬ್ಬ" ಎಂದು. ಆತನನ್ನು ಬರಬ್ಬನೆನಿಸಿಕೊಳ್ಳುವ ಯೇಸುವಿನಿಂದ ಆತನನ್ನು ಬೇರ್ಪಡಿಸುವ ಎಂದು ಪಿಲಾತನು "ಕ್ರಿಸ್ತನಾದ ಯೇಸು" ಎಂದು ಸಂಬೋಧಿಸಿ ಮಾತನಾಡುತ್ತಿದ್ದಾನೆ. [20]ಈ ಪುಸ್ತಕದಲ್ಲಿ ನಂತರದಲ್ಲಿ ಸಿಕ್ಕುವ "ತೋಟದಲ್ಲಿ" ಎಂಬ ಪಾಠವನ್ನು "ಅಬ್ಬಾ" ಎಂಬ ಪದದ ಅರ್ಥಕ್ಕಾಗಿ ನೋಡಿರಿ.

[21]"ಪೊಂತಿಯ ಪಿಲಾತನು (ಮತ್ತಾ ಯೇಸುವಿನ ಮರಣ)" ಎಂಬ ಅಧ್ಯಯನದ ಉಪಲೇಖನ ಅಧ್ಯಾಯನವನ್ನು ನೋಡಿರಿ. [22]"ಕಳ್ಳ" ಎಂಬ ಪದದ ಗ್ರೀಕ್ ಭಾಷಾಂತರವು ದೊಂಬಿಯನ್ನು ಸೂಚಿಸುವುದಾಗಿದೆ. "ಕಳ್ಳ" ಎಂಬುದರ ಬದಲು NIV ಯಲ್ಲಿ "ಬಂಡಾಯದಲ್ಲಿ ಪಾಲು ತೆಗೆದುಕೊಂಡವನು" ಎಂದಿದೆ. ಇದೇ ರೀತಿಯ ಪದವು ಯೇಸುವಿನ ವಿರುದ್ಧ ಮಹಾಸಭೆಯು ದೋಷರೋಪಮಾಡಿದಾಗಲೂ ಬಳಸಲ್ಪಟ್ಟಿತ್ತು. [23]ದೊಂಬಿಯ ಆರಂಭದಲ್ಲಿ ಆತನು ರೋಮಾ ಸೈನಿಕರನ್ನು ಕೊಂದಿರಬಹುಜು. [24]ವಿಜಯಶಾಲಿಯ ಪ್ರವೇಶದ ಆರಂಭದಲ್ಲಿ ಯೇಸು

ಗೌರವಿಸಲ್ಪಟ್ಟಿದನು. [25]ಮತ್ತಾಯ 27:19 "ನ್ಯಾಯಾಸನದ ಮೇಲೆ ಕೂತಿರುವಾಗ" ಎಂದು ಹೇಳುತ್ತದೆ. "ನ್ಯಾಯಸನ" ಎಂಬ ಪದವು ಅಧಿಕಾರಿಗಳು ಅಧಿಕಾರದ ಪ್ರಕಟಣೆಯನ್ನು ಮಾಡುವಂಥ ಸ್ಥಳವನ್ನು ಸೂಚಿಸುವಂಥ ಬಿಮಾ ಎಂಬ ಪದದಿಂದ ಭಾಷಾಂತರವಾಗಿದೆ. [26]ಅಂಥ ಭಕ್ತಿಯ ವಿಶ್ವಾಸಿಗಳು ಕನಸುಗಳ ದೊಡ್ಡ ಸಂಗ್ರಹದಿಂದ ತುಂಬಿಸಿರುತ್ತಾರೆ, ಆದರೆ ನಾವು ಹಾಗೆಯೇ ಮಾಡಬೇಕೆಂಬುದು ಇದರ ಅರ್ಥವಲ್ಲ. ತನ್ನ ಜನರರೊಡನೆ ಸಂಪರ್ಕಿಸಲು ದೇವರು ಕನಸುಗಳನ್ನು ಬಳಸುವುದುಂಟು (ಮತ್ತಾಯ 1:20; 2:12, 13, 19, 22) - ಆದರೆ ಅದು ಬಹಳ ಸಮಯದವರೆಗೆ ಇರದೆ ಹೋಯಿತು. ಮುಂದೆ ಪಿಲಾತನ ಹೆಂಡತಿಯ ಕನಸಿನಲ್ಲಿ ಯಾವುದೇ ಅದ್ವೀತಿಯ ನಿಯೋಗವು ಒಳಗೊಂಡಿದೆ ಎಂದು ನಂಬುವುದಕ್ಕೆ ಅಲ್ಲಿ ಯಾವುದೇ ಕಾರಣವು ಇಲ್ಲ. "ಸತ್ಪುರುಷ" ಎಂದು ಅವಳು ಕರೆದಿರುವುದರಲ್ಲಿನ ವಾಸ್ತವವು ಆತನ ಬಗ್ಗೆ ಮುಖ್ಯ ಜ್ಞಾನವನ್ನು ಒದಗಿಸುವುದಾಗಿದೆ. ಆಕೆಯ "ಸತ್ಪುರುಷ" ಎಂದು ತಿಳಿದಿರುವಂತಹ, ಮತ್ತು ಆಕೆಯ ಕನಸಿನಲ್ಲಿ ಬಹಳ ತೊಂದರೆ ಹೊಂದಿದ ಮನುಷ್ಯನಾದ ಯೇಸುವನ್ನು ರೋಮನ್ ಸೈನಿಕರು ಸೆರೆಹಿಡಿಯುವದರಲ್ಲಿ ಇದ್ದಾರೆ ಎಂದು ಆಕೆಯು ತಿಳಿದಿರಬಹುದು. [27]"ಹೊಸನ್ನ!" ಎಂದು ವಾರದ ಮೊದಲು ಕೂಗಿದ ಗುಂಪು ಐದು ದಿನಗಳ ನಂತರ "ಶಿಲುಬೆಗೆ ಹಾಕು!" ಎಂದು ಕೂಗಿದ್ದನ್ನು ಅನೇಕರು ಜನರ ಚಂಚಲರಾಗುತ್ತಾರೆ, ಮತ್ತು ಸರಳವಾಗಿ ಕೌಶಲ್ಯವನ್ನು ತೋರುವವರಾಗಿತ್ತಾರೆ ಆದರೆ ಈ ಎಲ್ಲಾ ಸಂಗತಿಗಳಲ್ಲಿ, ಭಾನುವಾರದ ಸಂತಸಭರಿತರಾದ ಜನರ ಗುಂಪಿನಲ್ಲಿ ಇರುವವರು ಶುಕ್ರವಾರದ ರಕ್ತಪಿಪಾಸೆಯ ಗುಂಪಿನಲ್ಲಿ ಇರಬೇಕಾದ ಅವಶ್ಯಕತೆಯು ಇಲ್ಲ. ಸಾವಿರಾರು ಜನರಲ್ಲಿ ಯೆರೂಸಲೇಮಿನಲ್ಲಿ ಹಬ್ಬಕ್ಕಾಗಿ ಇದ್ದರು. [28]ಸಾವಿರಾರು ವರಷದಿಂದ ಇಸ್ರಾಯೇಲರು ದೇವರಾದುಕೊಂಡ ಜನಾಂಗವಾಗಿದ್ದಾರೆ. [29]ತಿಬೇರಿಯದ ಕೈಸರನು ಕ್ರಿ.ಶ. 17-37ರವರೆಗೆ ಆಳುತ್ತಿದ್ದನು ಮತ್ತು ಲೂಕ 3:1 ಇದರ ಬಗ್ಗೆ ಹೇಳುವುದಾಗಿದೆ. [30]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 717.

[31]A. N. Sherwin-White, "Pilate, Pontius," *The International Standard Bible Encyclopedia,* rev., gen. ed. Geoffrey W. Bromiley (Grand Rapids, Mich.: Wm. B. Eerdmans Publishing Co., 1986), 3:868. [32]ಪಿಲಾತನು ಯೋಗ್ಯವಾದ ಕಾರಣಕ್ಕಾಗಿ ಭಯಪಟ್ಟಿದ್ದನು. ಕೆಲ ವರ್ಷದ ಹಿಂದೆ, ಅವನ ವಿರುದ್ಧ ಒಂದು ದೂರು ದಾಖಲಾಗಿತ್ತು ಉಪಲೇಖನವನ್ನು ನೋಡಿರಿ. [33]Walter Wangerin, Jr., *The Book of God: The Bible as a Novel* (Grand Rapids, Mich.: Zondervan Publishing House, 1996), 801. [34]US ನಲ್ಲಿನ ಒಂದು ಹೇಳಿಕೆಯು "ನಾನು ಆ ವಿಷಯದ ಬಗ್ಗೆ ಕೈ ತೊಳೆದುಕೊಳ್ಳುತ್ತೇನೆ" ಎಂದಿದೆ. ಇದರ ಅರ್ಥವು "ನಾನು ಇದಕ್ಕೆ ಇನ್ನೂ ಹೆಚ್ಚಾದದ್ದನ್ನು ಮಾಡಬೇಕಿಲ್ಲ" ಮತ್ತು "ಈ ವಿಷಯವಾಗಿ ಏನಾದರೂ ಸಂಭವಿಸಿದ್ದೇ ಆದರೆ ಇದರಲ್ಲಿ ನನ್ನ ತಪ್ಪೇನಿಲ್ಲ" ಎಂದು ಸೂಚಿಸುವುದಾಗಿದೆ. [35]ಈ ಕಾರ್ಯವು ಮಾತುಗಳಲ್ಲಿ ಅಥವಾ ಕಾರ್ಯಗಳಲ್ಲಿ ಎಂದು ತೀರ್ಮಾನಿಸುವುದಿಲ್ಲ ಒಂದು ಮಾರ್ಗ ಅಥವಾ ಇನ್ನೊಂದು, ಕೆಲಸಾರಿ ಅನೇಕರು ಯೇಸುವನ್ನು ಕ್ರೂಜೆಗೆ ಹಾಕಿದರು ಮತ್ತು ಆತನಿಗೆ ಅವಮಾನ ಮಾಡಿದರು (ನೋಡಿರಿ ಇಬ್ರಿಯ 6:6). ಯೆಹೂದಿಗಳು ಅಥವಾ ಅನ್ಯರು, ನಾವೆಲ್ಲರೂ ದೇವರ ಕೃಪೆಯನ್ನು ಅವಶ್ಯಕತೆಯಿರುವ ಪಾಪಿಗಳು ಆಗಿದ್ದೇವೆ (ರೋಮಾಪುರ 3:23ರನ್ನು ಈ ಸಂದರ್ಭದಲ್ಲಿ ನೋಡಿರಿ). [36]ಯೋಹಾನ 19:16ರಲ್ಲಿ "ಆತನು ಶಿಲುಬೆಗೆ *ಹಾಕುವುದಕ್ಕೆ* ಅವರಿಗೆ ಒಪ್ಪಿಸಲ್ಪಟ್ಟನು" ಎಂದಿದೆ (ಒತ್ತಿ ಹೇಳಿದ್ದು ನನ್ನದು). ಈ ಸಂದರ್ಭದಲ್ಲಿ, "ಅವರಿಗೆ" ಎಂಬುದು ಮಹಾಯಾಜಕರಿಗೆ ಎಂದು ಸೂಚಿಸುವುದಾಗಿದೆ, ಆದರೆ ಯೇಸುವನ್ನು ಶಿಲುಬೆ ಹಾಕಿದವರು ಯೆಹೂದಿ ಯಾಜಕರಲ್ಲ. ಆ ಪದವು ಕೇವಲ ಪಿಲಾತನು ಆ ನಾಯಕರುಗಳಿಗೆ ಯೇಸುವನ್ನು ಒಪ್ಪಿಸಿಕೊಟ್ಟನು ಎಂದು ಮಾತ್ರ ಆಗಿದೆ. [37]"ಗಬ್ಬಥಾ" ಎಂದರೆ "ಉಚ್ಚಾಟಿಸಲ್ಪಟ್ಟ ಸ್ಥಳ" ಎಂದರ್ಥ. ಇದು ಗ್ರೀಕ್ ಪಗ ಬೀಮಾ ಎಂಬ ಪದಕ್ಕೆ ಸಮಾನವಾಗಿದೆ. [38]ಹಿಂದಿನ ಓದುಗರು ಆ ಮಾರ್ಗವು ಎಲ್ಲಿದೆ ಎಂದು ತಿಳಿದವರಾಗಿದ್ದರು, ಆದರೆ ಅದರ ಬಗ್ಗೆ ನಮಗೆ ಖಚಿತತೆಯು ಇಲ್ಲ. ಪ್ರಾಚ್ಯವಸ್ತು ಶಾಸ್ತ್ರಜ್ಞರು ಆ ಮಾರ್ಗದ ಪ್ರದೇಶವನ್ನು ಕ್ಯಾಸಲ್ ಅಂತೋನಿಯಾದಲ್ಲಿ ಗುರುತಿಸಿದ್ದಾರೆ. ಆದರೆ ಕೆಲವರು ಅದು ಹೆರೋದನ ಅರಮನೆ ಎಂದು ನಂಬುವವರಾಗಿದ್ದಾರೆ (ಹಿಂದಿನ ಸ್ಥಳದ ಮೇಲಿನ ಚರ್ಚೆಯನ್ನು ನೋಡಿರಿ). [39]ಯೋಹಾನನ ವಿವರಣೆಯು ಬಹುಶಃ ಆ ಸಮಯದಲ್ಲಿ ಪ್ರತ್ಯಕ್ಷವಾಗಿ ರೋಮನ್ನರು ಬಳಸಿದ ಅಪಹಾಸ್ಯವನ್ನು ಮತ್ತು ಯೆರೂಸಲೇಮಿನ ಪತನದ ಮೂರು ವಿವರಣೆಗಳ ನಂತರದಲ್ಲಿ ಅನೇಕ ವರ್ಷಗಳ ನಂತರದಲ್ಲಿ ಬಹುಶಃ ಬರೆಯದಿರಬಹುದು. ಯೆಹೂದಿ ಎಣಿಕೆಯ ಪ್ರಕಾರ, ಹೊಸ ದಿನವು ಮಧ್ಯರಾತ್ರಿಯಿಂದ ಆರಂಭವಾಗುತ್ತಿತ್ತು (ಈ ದಿನಗಳಲ್ಲಿ ನಾವು ಬಳಸುವ ಹಾಗೆ). ಯೆಹೂದಿ ಎಣಿಕೆಯನ್ನು ಬಳಸಿದ ಮಾರ್ಕನು, ಯೇಸು ಮೂರು ಘಂಟೆಯ ಹೊತ್ತಿಗೆ ಕ್ರೂಜೆಗೆ ಹಾಕಲ್ಪಟ್ಟನು ಎಂದಿದ್ದಾನೆ (ಮಾರ್ಕ 15:25). ಅದು ಮುಂಜಾನೆಯ 9 ಘಂಟೆ. ಮತ್ತಾಯನು

ಯೆಹೂದಿ ಎಣಿಕೆಯನ್ನು ಬಳಸುತ್ತಾ ಮಧ್ಯಾಹ್ನ ಹನ್ನೆರಡು ಘಂಟೆಯಿಂದ ಮಧ್ಯಾಹ್ನ ಮೂರು ಘಂಟೆಯವರೆಗೂ (ಆರು ತಾಸಿನಿಂದ ಒಂಭತ್ತನೆಯ ತಾಸಿನವರೆಗೂ) ಆ ದೇಶದ ಮೇಲಲ್ಲ ಕತ್ತಲೆಯು ಕವಿದಿತ್ತು ಎಂದು ಹೇಳುತ್ತಾನೆ (ಮತ್ತಾಯ 27:45; ನೋಡಿರಿ ಮಾರ್ಕ 15:33; ಲೂಕ 23:44). ಆಂದರೆ ಯೇಸು ಮರಣಿಸಿದ್ದು ಮಧ್ಯಾಹ್ನ 12 ರಿಂದ 3 ರವರೆಗೆ (ಮತ್ತಾಯ 27:46-50; ನೋಡಿರಿ ಮಾರ್ಕ 15:34-37; ಲೂಕ 23:44-46). ಯೋಹಾನನು ರೋಮನ್ನರ ಎಣಿಕೆಯನ್ನು ಬಳಸಿದ್ದೇ ಆದರೆ ಯೋಹಾನನ ಆರನೆಯ ತಾಸು ಈ ಕಾಲಾಕ್ರಮದಲ್ಲಿ ಹೊಂದಬೇಕಾದರೆ ಇದೊಂದೆ ಮಾರ್ಗವಾಗಿದೆ. [40]ಪಿಲಾತನು ಯೇಸುವಿಗೆ ಪ್ರಾಥಕಾಲ 6 ಘಂಟೆ ಮರಣದಂಡನೆಯನ್ನು ಕೊಟ್ಟದ್ದರಿಂದ (ಯೋಹಾನ 19:14ರಲ್ಲಿನ ಟಿಪ್ಪಣೆಯನ್ನು ನೋಡಿರಿ), ಯೇಸುವನ್ನು ಮರಣದಂಡನೆ ಒಪ್ಪಿಸುವಲ್ಲಿ ಮತ್ತು ಕ್ರೂಜಡೆಗೆ ಹಾಕುವಲ್ಲಿ ಇವುಗಳ ಮಧ್ಯ ಅನೇಕ ತಾಸುಗಳು ಸಾಗಿಹೋದವು. ಆ ಸಮಯವು ಅವಶ್ಯಕವಾದ ಸಿದ್ಧತೆಗಳನ್ನು ಮಾಡಲು ಬಳಸಿರಬೇಕು.

[41]ಈ ಆಟಕ್ಕೆ ಇರುವ ಒಂದು ಸೇರಿಸುವಿಕೆ ತೃಣವಾದುದು, ಮೊದಲು ಕೋಲು ಅಪಹಾಸ್ಯಮಾಡಲು ಬಳಸಲ್ಪಟ್ಟಿತು ಮತ್ತು ನಂತರದಲ್ಲಿ ಯೇಸುವನ್ನು ಹೊಡೆಯಲು ಬಳಸಲ್ಪಟ್ಟಿತು (ಮತ್ತಾಯ 27:30). [42]ಒತ್ತಡಗಳು ಬಂದಾಗ ಇನ್ನೂ ಒತ್ತಡಕ್ಕೆ ನಮ್ಮನ್ನು ಒಳಪಡಿಸುವೆವು ಎಂಬ ವಿಚಾರವು Warren W. Wiersbe, *The Bible Exposition Commentary*, vol. 1 (Wheaton, Ill.: Victor Books, 1989), 101 ರಿಂದ ಬಂದ್ದಾಗಿದೆ. [43]ನಂತರ ಪೇತ್ರನು ದೇವರಿಗೆ ಒಳಗಾದನು, ಮತ್ತು ಪಂಚಾಶತ್ತಮ ದಿನದಂದು ಗುಂಪಿನಲ್ಲಿ ಕೆಲವರು ದೇವರಿಗೆ ಒಳಗಾದರು, ಆದರೆ ಈ ಅಧ್ಯಯನದಲ್ಲಿ ಈ ಕಥೆಯನ್ನು ಮುಗಿಸಲು ನಾವು ತೆಗೆದುಕೊಂಡ ಹೊತ್ತಿನಲ್ಲಿ ಇವುಗಳಲ್ಲಿ ಯಾವವು ಆಗಲಿಲ್ಲ. [44]Neal Pollard, "Pilate's Mistakes," *Vigil* (November–December 2001): 53–54.